ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 75 RNI Number : KNKAN/25/A2770 24-03-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :75 ರಾಯಚೂರು 24-03-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಅಕ್ರಮ-ಸಕ್ರಮ ಯೋಜನೆಯಡಿ 3 ತಿಂಗಳೊಳಗೆ ಸಕ್ರಮ ಮಾಡಿಕೊಳ್ಳದಿದ್ದರೆ ವಿದ್ಯುತ್ ಸಂಪರ್ಕ ಕಡಿತ

ಬೆಂಗಳೂರು: ಅನಧಿಕೃತವಾಗಿ ಕೃಷಿ ಪಂಪ್‌ಸೆಟ್‌ಗಳಲ್ಲಿ ವಿದ್ಯುತ್ ಸಂಪರ್ಕ ಪಡೆದವರಿಗೆ ಅಕ್ರಮ-ಸಕ್ರಮ ಯೋಜನೆಯಡಿ ಸಕ್ರಮಗೊಳಿಸಲು ಮೂರು ತಿಂಗಳ ಅವಕಾಶ ನೀಡಲಾಗಿದ್ದು, ನಿಗದಿತ ಶುಲ್ಕ ಪಾವತಿಸದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಇಂಧನ ಸಚಿವ ಕೆ. ಜೆ. ಜಾರ್ಜ್ ಎಚ್ಚರಿಸಿದ್ದಾರೆ.

ಕೃಷಿ ಪಂಪ್‌ಸೆಟ್‌ಗಳಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಒಂದು ಕೃಷಿ ಪಂಪ್‌ಸೆಟ್‌ಗೆ ಸುಮಾರು 4.5 ಲಕ್ಷ ವೆಚ್ಚವಾಗಲಿದೆ. ಸರ್ಕಾರವೇ 3 ಲಕ್ಷ ರೂಪಾಯಿ ಭರಿಸುತ್ತಿದೆ. ಬಾಕಿ ₹1.5 ಲಕ್ಷವನ್ನು ಬಳಕೆದಾರರು ಪಾವತಿಸಬೇಕು. ಕೆಲವರು ಈ ಶುಲ್ಕ ಪಾವತಿಸಿಲ್ಲ. ಅವರಿಗೆ ಮೂರು ತಿಂಗಳು ಅವಕಾಶ ನೀಡಲಾಗಿದ್ದು, ಹಣ ಕಟ್ಟದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ವಿಧಾನಪರಿಷತ್‌ನಲ್ಲಿ ಗಮನ ಸೆಳೆಯುವ ಸೂಚನೆ ವೇಳೆ ಸಚಿವರು ತಿಳಿಸಿದರು.

ಇದಕ್ಕೂ ಮುನ್ನ ಮೇಲ್ಮನೆ ಸದಸ್ಯ ಗೋವಿಂದರಾಜ್ ಮಾತನಾಡಿ, ದೀರ್ಘಾವಧಿ ವಿದ್ಯುತ್ ಖರೀದಿ ಒಪ್ಪಂದದ ವೆಚ್ಚಕ್ಕೂ ರಾಜ್ಯ ಸರ್ಕಾರ ಭರಿಸುತ್ತಿರುವ ಮೊತ್ತದ ನಡುವೆ ಭಾರಿ ವ್ಯತ್ಯಾಸವಿದೆ. ತೀವ್ರ ಸಂಕಷ್ಟದಿಂದ ಎಸ್ಕಾಂಗಳು ಸಾಲದ ಮೊರೆ ಹೋಗಿದ್ದು 45 ಸಾವಿರ ಕೋಟಿ ರೂಪಾಯಿ ದಾಟಿದೆ. ಇದರಿಂದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಬರಬೇಕಾದ ಬಾಕಿ 19 ಸಾವಿರ ಕೋಟಿಯಿದೆ. ಈ ಹೊರೆ ತಗ್ಗಿಸಲು ಗ್ರಾಹಕರ ಮೇಲೆ ಹಾಕುವ ಸಾಧ್ಯತೆ ಬಗ್ಗೆ ಸರ್ಕಾರದ ಗಮನ ಸೆಳೆದರು.

ಈ ವೇಳೆ ಮಾತನಾಡಿದ ಸಚಿವ ಕೆ.ಜೆ. ಜಾರ್ಜ್ ಮಾತನಾಡಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಅನುಮತಿ ಪಡೆದು ದೀರ್ಘಾವಧಿ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲಾಗಿದೆ. ವಿದ್ಯುತ್ ಖರೀದಿಗೆ ಅನುಗುಣವಾಗಿ ಮೂಲಸೌಕರ್ಯ ಕಲ್ಪಿಸಲು ಸಾಲದ ಮೊರೆ ಅನಿವಾರ್ಯವಾಗಿದೆ. ಬಜೆಟ್‌ನಲ್ಲಿ ಇದಕ್ಕಾಗಿ ಪ್ರತ್ಯೇಕ ಅನುದಾನವಿಲ್ಲ. ಪ್ರತಿವರ್ಷ ವಿದ್ಯುತ್ ಬೇಡಿಕೆ ಹೆಚ್ಚಾದಂತೆ ಬಂಡವಾಳ ವೆಚ್ಚ ಸರಿದೂಗಿಸಿ ನಿರ್ವಹಣೆಗಾಗಿ ಎಸ್ಕಾಂಗಳು ಹಾಗೂ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲಾಗಿದೆ. ಇದರ ಮೊತ್ತ 42,750 ಕೋಟಿಯಾಗಿದ್ದು, ಬೆಸ್ಕಾಂನಲ್ಲಿ ಕಳೆದ ಫೆಬ್ರುವರಿ ಅಂತ್ಯಕ್ಕೆ 17,556 ಕೋಟಿಯಾಗಿದೆ ಎಂದರು.

ಪಡೆದ ಸಾಲವನ್ನು ಸಕಾಲಕ್ಕೆ ಸರ್ಕಾರ ತೀರಿಸುತ್ತಿದೆ. ಗೃಹಜ್ಯೋತಿ, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಸಬ್ಸಿಡಿ ಯೋಜನೆಗಳ ಸಂಬಂಧ ಸರ್ಕಾರವು ನಿಗದಿತ ಸಮಯದಲ್ಲಿ ಎಸ್ಕಾಂಗಳಿಗೆ ಹಣ ಪಾವತಿಸಲಾಗುತ್ತಿದೆ. ವಿದ್ಯುತ್ ನಿರ್ವಹಣೆ ಹಾಗೂ ದುರಸ್ತಿಗಾಗಿ ಮೀಸಲಿಟ್ಟಿರುವ ಹಣವನ್ನು ಅನ್ಯ ಕಾರ್ಯಕ್ಕೆ ಬಳಸದಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.



ದಿ.25: ವಿಶ್ವಕರ್ಮರನ್ನು ಎಸ್.ಟಿ.ಗೆ ಸೇರ್ಪಡೆ ಆಗ್ರಹಿಸಿ ಪಂಜಿನ ಮೆರವಣಿಗೆ

ರಾಯಚೂರು,ಮಾ. 23-

ವಿಶ್ವಕರ್ಮರನ್ನು ಎಸ್.ಟಿ.ಗೆ ಸೇರಿಸಬೇಕೆಂದು ಒತ್ತಾಯಿಸಿ ದಿ.25 ರಂದು ರಾಯಚೂರಲ್ಲಿ ಪಂಜಿನ ಮೆರವಣಿಗೆ ನಡೆಯಲಿದೆ ಎಂದು ಸಮಾಜದ ಜಿಲ್ಲಾಧ್ಯಕ್ಷರಾದ ಮಾರುತಿ ಬಡಿಗೇರ ಅವರು ಹೇಳಿದರು.ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ,ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಹಾಗೂ ಜಿಲ್ಲಾ ವಿಶ್ವಕರ್ಮ ನೇತೃತ್ವದಲ್ಲಿ ವಿಶ್ವಕರ್ಮ ಸಮಾಜವನ್ನು ಪರಿಶಿಷ್ಟ ಪಂಗಡ ಎಸ್.ಟಿ ಗೆ ಸೇರಿಸಬೇಕು ಎಂದು ಪಂಜಿನ ಮೆರವಣಿಗೆ ನಡೆಯಲಿದೆ ಎಂದರು.ಕುಲಶಾಸ್ತ್ರ ಅಧ್ಯಯನ ಅಸಂಜಸವಾಗಿದೆ. ಇದನ್ನು ಕೂಡಲೇ ಸರ್ಕಾರ ಸರಿಪಡಿಸಬೇಕು. ತಿಂಥಣಿ ಶ್ರೀ ಜಗದ್ಗುರು ಮೌನೇಶ್ವರ ದೇಸವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ ದಿ.27 ರಂದು ಸಂಜೆ 6 ಗಂಟೆಗೆ ನಗರದ ನೇತಾಜಿ ವೃತ್ತದಿಂದ ಅಂಬೇಡ್ಕರ ವೃತ್ತದ ವರೆಗೆ ಪಂಜಿನ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು. ರಾಯಚೂರು ಜಿಲ್ಲೆ ಸೇರಿದಂತೆ ಯಾದಗಿರಿ, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಹಾಗೂ ಮಟ್ಟದ ವಿಶ್ವಕರ್ಮ ಸಮಾಜದ ಹೊಸಪೇಟೆ ವಿಜಯನಗರ ಜಿಲ್ಲೆಗಳಿಂದ ತಾಲೂಕ, ಹೋಬಳಿ ಮಹಿ ಮುಖಂಡರು ಈ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ. ವಿಶ್ವಕರ್ಮ ಸಮುದಾಯದಲ್ಲಿ ರಾಯಚೂರು ಜಿಲ್ಲೆಯಲ್ಲಿ ಮೊದಲ ಬಾರಿಗೆ ಎಸ್.ಟಿ. ಮೀಸಲಾತಿಗಾಗಿ ಒತ್ತಾಯಿಸಿ ವಿಶ್ವಕರ್ಮರು 100 ಕಿ.ಮೀಟರ್ ಪಾದಯಾತ್ರೆ, ಅರೆಬೆತ್ತಲೆ ಮೆರವಣಿಗೆ, ಈದೀಗ ಪಂಜಿನ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ನಗರದ ನೇತಾಜಿ ನಗರ ವೃತ್ತದಿಂದ ತೀನ್‌ಕಂದಿಲ್, ಜಾಕೀರ್ ಹುಸೇನ್ ಸರ್ಕಲ್, ಮತ್ತು ಬಸ್‌ನಿಲ್ದಾಣದ ಮೂಲಕ ಅಂಬೇಡ್ಕರ ವೃತ್ತದಲ್ಲಿ ಪಂಜಿನ ಮೆರವಣಿಗೆ ನಡೆಯಲಿದೆ.ರಾಯಚೂರು ಚಿನ್ನ, ಬೆಳ್ಳಿ ಕೆಲಸಗಾರರ ಸಂಘ, ಕಾಳಿಕ ದೇವಸ್ಥಾನ ಸಮಿತಿ ವಿಶ್ವಕರ್ಮ ಕಾರ್‌ಮೆಂಟರ್ ಸಂಘ, ಜಿಲ್ಲಾ



3ನೇ ಪುಟ.....

ರೀಲ್ಸ್ ಹುಚ್ಚಿಗೆ ನದಿಗೆ ಜಿಗಿದ ಈಜು ಬಾರದ ಯುವಕ ಬಲಿ

ಸಿಂಧನೂರು,ಮಾ.22.

ನದಿಯಲ್ಲಿ ರೀಲ್ಸ್ ಮಾಡಲು ಹೋದ ಯುವಕನೋರ್ವ ಸಾವನ್ನಪ್ಪಿದ ಘಟನೆ ನಡೆದಿದೆ. ಮೃತಪಟ್ಟ ಯುವಕ.ಅಮನ ಖಾನ್. ತಂದೆ. ಖಾಜಾ ಖಾನ್. ವಯಸ್ಸು 22 ವರ್ಷ. ಗಂಗಾನಗರ ನಿವಾಸಿ ಎಂದು ತಿಳಿದು ಬಂದಿದೆ. ನಗರದ ಗಂಗಾ ನಗರದ. ಅಮನ್ ಖಾನ್. ತನ್ನ ಗೆಳೆಯರೊಂದಿಗೆ ತಾಲೂಕಿನ ಮುಕುಂದ ಗ್ರಾಮದಲ್ಲಿರುವ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಲು ಹೋಗಿದ್ದರು. ಮಧ್ಯಾಹ್ನ 3:00 ಸುಮಾರಿಗೆ ನದಿಯ ಹತ್ತಿರ ಗೆಳೆಯರೆಲ್ಲರೂ ಸೇರಿ ಊಟ ಮಾಡಿ ಸಂಜೆ 4 ಗಂಟೆಗೆ ಅಮನ್ ಖಾನ್ ನದಿಗೆ ಜಿಗಿದು ಸ್ನಾನ ಮಾಡುತ್ತಾ. ರೀಲ್ಸ ಮಾಡುವಾಗ ಉಳಿದ ಸ್ನೇಹಿತರು ತಮ್ಮ ತಮ್ಮ ಮೊಬೈಲ್ ಗಳಲ್ಲಿ. ಚಿತ್ರೀಕರಣ ಮಾಡಿಕೊಳ್ಳುತ್ತಿದ್ದರು. ರೀಲ್ಸ್ ಮಾಡುತ್ತಾ ಸ್ನಾನ ಮಾಡು ತಿದ್ದ ಅಮನ್ ಖಾನ್. ಈಜು ಬಾರದೆ ನದಿಯಲ್ಲಿ ಮುಳುಗುತ್ತಿರುವುದನ್ನು ಕಂಡ ಸ್ನೇಹಿತರು. ಗ್ರಾಮಸ್ಥರಿಗೆ ಮಾಹಿತಿ ನೀಡಿದರು. ಸ್ಥಳದಲ್ಲಿದ್ದ ಮೀನುಗಾರರು. ನದಿಗೆ ಇಳಿದು ಅಮಾನ್ ಖಾನ್ ನನ್ನು. ನದಿ ನೀರಿನಿಂದ ಹೊರಗೆ ತೆಗೆದು ನೋಡುವಷ್ಟರಲ್ಲಿ ಯುವಕ ಸಾವನ್ನಪ್ಪಿದ್ದು ಗೊತ್ತಾಗಿದೆ. ಮೃತಪಟ್ಟ ಅಮನ ಖಾನ್ ಜೊತೆಗಿದ್ದ ಗೆಳೆಯರ ಸಹಾಯದಿಂದ. ಸಂಜೆ 5 ಗಂಟೆಗೆ. ಮೃತಪಟ್ಟ ಯುವಕನ ಕುಟುಂಬಸ್ಥರಿಗೆ. ಹಾಗೂ ಗ್ರಾಮೀಣ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ ಮೇಲೆ ಗ್ರಾಮೀಣ ಠಾಣೆಯ ಪೊಲೀಸರು ಸ್ಥಳಕ್ಕೆ ಹೋಗಿ ಮೃತ ಶರೀರವನ್ನು. ಮರಣೋತ್ತರ ಪರೀಕ್ಷೆಗಾಗಿ. ತಾಲೂಕ ಸಾರ್ವಜನಿಕ ಆಸ್ಪತ್ರೆಗೆ ತಂದು. ಮರಣೋತ್ತರ ಪರೀಕ್ಷೆ ನಡೆಸಿದರು. ಮೃತಪಟ್ಟ ಅಮನ ಖಾನ್. ತಂದೆ ಖಾಜಾ ಖಾನ್. ಸಿಂಧನೂರ್ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದು. ಮಗ ಮೃತಪಟ್ಟ ಸುದ್ದಿಯನ್ನು ತಿಳಿದು. ಪಾಲಕರು ಆಸ್ಪತ್ರೆಗೆ ಬಂದು ಕಣ್ಣೀರು ಇಡುತ್ತಿರುವ ದೃಶ್ಯ . ಮನಕಲುಕುತ್ತಿರುವಂತಿತ್ತು. ಗ್ರಾಮೀಣ ಪೊಲೀಸ್ ಠಾಣೆಯ. ಪಿ ಎಸ್ ಐ ಮೌನೇಶ್ ರಾಥೋಡ್. ಆಸ್ಪತ್ರೆಗೆ ಬಂದು ಘಟನೆಯ ಬಗ್ಗೆ ಕುಟುಂಬಸ್ಥರಿಂದ ಮಾಹಿತಿಯನ್ನು ಪಡೆದುಕೊಂಡರು. ಮೃತಪಟ್ಟ ಯುವಕನ ಜೊತೆಗೆ ಇದ್ದ ಸ್ನೇಹಿತರಾದ. ಮಹಮ್ಮದ್ ಲುಕ್ಮಾನ ನ ಜೊತೆ ಬೈಕ್ ಮೇಲೆ. ಅಮನ ಖಾನ್ ನದಿಗೆ ಹೋಗಿದ್ದ ಎನ್ನಲಾಗಿದೆ. ಒಟ್ಟು 9 ಜನರ ತಂಡ ನದಿಗೆ ಈಗಲೂ ಹೋಗಿತ್ತು ಎಂದು ತಿಳಿದು ಬಂದಿದೆ. ಈಗ ಅವರೆಲ್ಲರೂ ನಾಪತ್ತೆಯಾಗಿದ್ದು. ಅವರು ಪತ್ತೆಯಾದ ಮೇಲೆ ಘಟನೆಯ ಸಂಪೂರ್ಣ ಮಾಹಿತಿ ಸಿಗಲಿದೆ ಎಂದು ಹೇಳಲಾಗಿದೆ.



ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿ ಹಿಂಪಡಿಯದಿದ್ದರೆ ಪರಿಶಿಷ್ಟಜಾತಿ ವರ್ಗೀಕರಣ ಅಸಾಧ್ಯ-ಮಹೇಂದ್ರ, ಕುಮಾರ ಮಿತ್ರ

ರಾಯಚೂರು, ಮಾ.23-

ರೋಸ್ಟರ್ ಪದ್ಧತಿ ಅನ್ವಯ ಪರಿಶಿಷ್ಟ ಜಾತಿ ವರ್ಗೀಕರಣವಿಲ್ಲದೆ ರಾಜ್ಯ ಸರಕಾರ ನ್ಯಾಯಾಲಯಕ್ಕೆ ಸಲ್ಲಿಸಿದ ರಿಟ್ ಅರ್ಜಿಯನ್ನು ಹಿಂಪಡಿದರೆ ಮಾತ್ರ ದಿ.27 ರಂದು ನಡೆಯುವ ಸಚಿವ ಸಂಪುಟದಲ್ಲಿ ಮಾದಿಗ ಸಮುದಾಯಕ್ಕೆ ನ್ಯಾಯ ದೊರೆಯುವ ಸಾಧ್ಯತೆ ಎಂದು ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿ ರಾಜ್ಯಾಧ್ಯಕ್ಷರಾದ ಮಹೇಂದ್ರ ಕುಮಾರ ಮಿತ್ರಾ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ರೋಸ್ಟರ್ ಪದ್ಧತಿ ಪ್ರಕಾರ ಈಗಾಗಲೇ ರಾಜ್ಯ ಸರ್ಕಾರ 56 ಸಾವಿರ ಹುದ್ದೆಗಳ ಭರ್ತಿಗೆ ಮುಂದಾಗಿದೆ. ಕಾಂಗ್ರೆಸ್ ಸರಕಾರಕ್ಕೆ ಒಳಮೀಸಲಾತಿ ಜಾರಿ ಮಾಡುವ ಉದ್ದೇಶವಿಲ್ಲ, ಕಾಂಗ್ರೆಸ್ ಪಕ್ಷದಲ್ಲಿ ಮಾದಿಗ ಸಮುದಾಯಕ್ಕೆ ಹಿಡಿತವಿಲ್ಲ. ಒಳಮೀಸಲಾತಿ ಜಾರಿ ನೆಪದಲ್ಲಿ ಮಾದಿಗ ಸಮುದಾಯಕ್ಕೆ ತೀವ್ರ ಅನ್ಯಾಯ ಮಾಡುತ್ತಿದೆ. ಕೇವಲ ಒಳಮೀಸಲಾತಿ ಹೋರಾಟ ಸಮತಿ ಹಾಗೂ ಮಾದಿಗ ಸಮುದಾಯದ ಮುಖಂಡರ ಒಳಮೀಸಲಾತಿ ಜಾರಿ ಮಾಡುವಂತೆ ಸರಕಾರಕ್ಕೆ ಒತ್ತಡ ಮಣಿದು ಇದೇ ತಿಂಗಳು 27 ರಂದು ವಿಶೇಷ ಸಚಿವ ಸಂಪುಟ ಕರೆಯಲಾಗಿದೆ. ಮಾ.,2 ರಂದು ರಾಜ್ಯ ಸರಕಾರ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ರೋಸ್ಟರ್ ಪದ್ಧತಿ ಪ್ರಕಾರ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ರಾಜ್ಯದಲ್ಲಿ 56 ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಕ್ರಮ ವಹಿಸಲಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ ಎಂದರು. ಸಚಿವ ಸಂಪುಟದಲ್ಲಿ ಮಾದಿಗ ಸಮುದಾಯಕ್ಕೆ ನ್ಯಾಯ ಸಿಗಬೇಕಾದರೆ

ಅಡ್ವೋಕೇಟ್ ಜನರಲ್ ಅವರು ಸಲ್ಲಿಸಿದ ಅರ್ಜಿ ಹಿಂಪಡಿಯಬೇಕು. ಇಲ್ಲದಿದ್ದರೆ ಸಚಿವ ಸಂಪುಟದಲ್ಲಿ ಮಾದಿಗರಿಗೆ ಯಾವುದೇ ರೀತಿ ನ್ಯಾಯ ದೊರೆಯುವುದಿಲ್ಲ ಎಂದರು. ರಾಜ ಕಾಂಗ್ರೆಸ್ ಸರ್ಕಾರಕ್ಕೆ ವರ್ಗೀಕರಣ ಮಾಡುವ ಉದ್ದೇಶವಿಲ್ಲ. ಅದರಿಂದ ಒಳಮೀಸಲಾತಿ ಜಾರಿಯಲ್ಲಿ ವಿಳಂಬ ದೋರಣೆ ಅನುಸರಿಸಲಾಗುತ್ತಿದೆ.

ಒಂದು ವೇಳೆ ಒಳಮೀಸಲಾತಿ ಜಾರಿಯಾದರೆ ಮಾದಿಗರಿಗೆ ಶೇ. 6 ರಷ್ಟು ಮಿಸಲಾತಿ ದೊರೆಯುತ್ತದೆ. ಮಾದಿಗ ಸಮುದಾಯದಲ್ಲಿ ನೀರುದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶೇ.6ರ ಮೀಸಲಾತಿಯಲ್ಲಿ ಎಲ್ಲಾ ಮಾದಿಗರಿಗೆ ಉದ್ಯೋಗ ದೊರಕುವುದು ತುಂಬ ಕಷ್ಟ, ಒಂದು ವೇಳೆ ಕಾಂಗ್ರೇಸ್ ಸರ್ಕಾರವು



3ನೇ ಪುಟ.....

ನಿಯಮಿತವಾಗಿ ಚಲಿಸಲಿವೆ ವಿಶೇಷ ರೈಲುಗಳು : ಡಾ.ಬಾಬುರಾವ್

ರಾಯಚೂರು,ಮಾ.23-


ಕಲ್ಯಾಣ ಕರ್ನಾಟಕದ ಜನತೆಯ ಬಹುದಿನದ ಕನಸು ನನಸಾಗಿದೆ. ಬೆಂಗಳೂರು ಕಂಟೋನ್ಮೆಂಟ್ - ಕಲಬುರಗಿ ವಿಶೇಷ ಎಕ್ಸ್‌ಪ್ರೆಸ್ ರೈಲು (ರೈಲು ಸಂಖ್ಯೆ: 16563 / 16564) ಇನ್ನೂ ಮುಂದೆ ನಿಯಮಿತವಾಗಿ ಸಂಚರಿಸಲಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ. ಬಾಬುರಾವ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, 16563 ನಂಬರಿನ ಬೆಂಗಳೂರು ಕಂಟೋನ್ಮೆಂಟ್- ಕಲಬುರಗಿ ಎಕ್ಸ ಪ್ರೆಸ್ ರೈಲು ಬೆಂಗಳೂರು ಕಂಟೋನ್ಮೆಂಟ್ ನಿಂದ ಶನಿವಾರ ರಾತ್ರಿ 10 ಕ್ಕೆ ಹೊರಟು ಹೊರಟು ರಾತ್ರಿ 3ರಿಂದ 3-05 ಕ್ಕೆ ಧರ್ಮಾವರಂ, ಬೆಳಿಗ್ಗೆ 9.25 ರಿಂದ 9.30 ರ ವೇಳೆಗೆ ವಾಡಿ ಮೂಲಕ ಭಾನುವಾರ ಬೆಳಿಗ್ಗೆ 10.20ಕ್ಕೆ ತಲುಪಲಿದೆ ಎಂದು ಅವರು ತಿಳಿಸಿದ್ದಾರೆ.

16564 ಸಂಖ್ಯೆಯ ಕಲಬುರಗಿ ಬೆಂಗಳೂರು ಕಂಟೋನ್ಮೆಂಟ್ ಎಕ್ಸ್ ಪ್ರೆಸ್ ರೈಲು ಭಾನುವಾರ ರಾತ್ರಿ 11.20ಕ್ಕೆ ಹೊರಟು ವಾಡಿಗೆ 11:55 / 12:00, ಧರ್ಮವರಂ: 19:30 / 19:35 ಮೂಲಕ ಹಾಯ್ದು ಬೆಂಗಳೂರು ಕಂಟೋನ್ಮೆಂಟ್ ನ್ನು ಬೆಳಿಗ್ಗೆ 11 ಗಂಟೆಗೆ ತಲುಪಲಿದೆ. ಯಲಹಂಕ, ಹಿಂದೂಪೂರ, ಧರ್ಮಾವರಂ, ಅನಂತಪುರ, ಗುಂತಕಲ್, ಆದೋನಿ, ಮಂತ್ರಾಲಯಂ ರಸ್ತೆ, ರಾಯಚೂರು, ಕೃಷ್ಣಾ, ಯಾದಗಿರಿ, ಶಹಬಾದ್ ರೈಲು ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ . ವಾರಕ್ಕೆ ಒಮ್ಮೆ ಬೆಂಗಳೂರುದಿಂದ: ಶನಿವಾರ ಕಲಬುರಗಿಯಿಂದ: ಭಾನುವಾರ ಈ ರೈಲು ನಿಯಮಿತವಾಗಿ ಸಂಚರಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಅದೇ ರೀತಿ ಎಸ್.ಎಂ.ವಿ ಟಿ ಬೆಂಗಳೂರು- ಬೀದರ್ ವಿಶೇಷ ರೈಲು ಈಗ ನಿಯಮಿತವಾಗಿ ಸಂಚರಿಸಲಿದ್ದು,

ಎಸ್.ಎಂ.ವಿ ಟಿ ಬೆಂಗಳೂರು- ಬೀದರ್ ವಿಶೇಷ ರೈಲು (ರೈಲು ಸಂಖ್ಯೆ: 16559 / 16560) ಬೆಂಗಳೂರಿನಿಂದ ಪ್ರತಿ ಶುಕ್ರವಾರ ಹಾಗೂ ಭಾನುವಾರ : ರಾತ್ರಿ 9.15 ಕ್ಕೆ ಹೊರಟು ಧರ್ಮವರಂ ಗೆ ರಾತ್ರಿ 12.20 ರಿಂದ 12.25 ರವರೆಗೆ ವಾಡಿಗೆ ಬೆಳಿಗ್ಗೆ 08:10



3ನೇ ಪುಟ.....

ರಾಜ್ಯ ಬಲಗೈ ಜಾತಿಗಳ ಮಹಾ ಒಕ್ಕೂಟದ ಹೋರಾಟಕ್ಕೆ ಮಹಾಸಭಾ ಬೆಂಬಲ

ರಾಯಚೂರು,ಮಾ.23-

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಮಹಾ ಒಕ್ಕೂಟದ ವತಿಯಿಂದ ಪರಿಶಿಷ್ಟ ಜಾತಿಯಲ್ಲಿ ವರ್ಗೀಕರಣದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಜ್ಞಾನ ಪ್ರಕಾಶ ಮತ್ತು ಬಸವನಾಗಿದೇವ ಸ್ವಾಮಿ ಜಿಗಳ ನೇತೃತ್ವದಲ್ಲಿ ದಿ. 25 ರಂದು ನಡೆಯುವ ಒಂದು ದಿನದ ಬೃಹತ್ ಹೋರಾಟಕ್ಕೆ ಮಾಲಾ ಮಹಾ-ಸಭಾ ಸಂಪೂರ್ಣ ಬೆಂಬಲ ನೀಡಲಾಗು ವುದು ಮಹಾಸಭಾ ಕರ್ನಾಟಕದ ಸಂಸ್ಥಾಪಕರು ಸಂಚಾಲಕರಾದ ಭಾಸ್ಕರ್ ರಾಜ್ ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರ್ಕಾರವ ರಾಜ್ಯದ ಪರಿಶಿಷ್ಟ ಜಾತಿ ಯವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ವರ್ಗೀಕರಣ ಒಳಮೀಸ ಲಾತಿ ಕಲ್ಪಿಸಲು ಪರಿಶಿಷ್ಟ ಜಾತಿ ಯಲ್ಲಿ 3 ಗುಂಪುಗಳನ್ನು ಮಾಡಿದೆ. ಪರಿಶಿಷ್ಟ ಜಾತಿ ಪ್ರವರ್ಗ-ಎ ಶೇ. 6ರಷ್ಟು ಪರಿಶಿಷ್ಟ ಜಾತಿ ಪ್ರವರ್ಗ-ಬಿ ಶೇ. 6 ರಷ್ಟು ಮತ್ತು ಪರಿಶಿಷ್ಟ ಜಾತಿ ಪ್ರವರ್ಗ-ಸಿ ಶೇ. 5 ರಷ್ಟು ತದನಂತರ ನ್ಯಾಯಾಲಯವು ಶೇ. 56 ರಷ್ಟು ಮೀಸಲಾತಿಗೆ ತಡೆ ನೀಡಲಾಗಿದೆ. 1932 ರಿಂದ ಇಲ್ಲಿಯವರಗೆ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯ ಬಲಗೈ ಸಮಾಜದವರು ಕಾಂಗ್ರೆಸ್ ಪಕ್ಷಕ್ಕೆ ಸತತವಾಗಿ ಮತದಾನ ಮಾಡಿ ಅಧಿಕಾರಕ್ಕೆ ತಂದಿದ್ದೇವೆ. ಕಾಂಗ್ರೆಸ್ ಪಕ್ಷವು ನಮಗೆ ಮೋಸ ಮಾಡುವುದಿಲ್ಲವೆಂದು ಈಗಾಗಲೇ ಸಾಬಿತು ಮಾಡಿದೆ. ರಾಜ್ಯದ ಉಚ್ಚ ನ್ಯಾಯಾ ಲಯದ ರಿಟ್ ಅರ್ಜಿಯಲ್ಲಿ ಪ್ರಕರ ಣದಲ್ಲಿ ಸರ್ಕಾರದ ಪರ ವಾದ ಮಾಡುವ ಸರ್ಕಾರಿ ವಕೀಲರು ಮುಖ್ಯಮಂತ್ರಿಗಳ ಅನುಮತಿಯ ಮೇರೆಗೆ ಈಗಾಗಲೇ ಉಚ್ಚ ನ್ಯಾಯಾಲಯಕ್ಕೆ ಹಳೆ ಮೀಸಲಾತಿ ರೊಸ್ಟರ್ ಪ್ರಕಾರ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಯಲ್ಲಿ ವರ್ಗೀಕರಣರಹಿತ ಪ್ರಕ್ರಿಯವನ್ನು ಪ್ರಾರಂಭಮಾಡುತ್ತೇ ವೆಂದು ಮೆಮೊ ಸಲ್ಲಿಸಿದ್ದಾರೆ.

ಉಚ್ಚ ನ್ಯಾಯಾಲಯವು ಸದರಿ ಮೆಮೊಗೆ ಅನುಮತಿ ನೀಡಿದರೆ ಪರಿಶಿಷ್ಟ ಜಾತಿಯಲ್ಲಿ ವರ್ಗೀಕರ'ಣರಹಿತ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ನೇಮಕಾತಿ ನಡೆಯುತ್ತವೆ ಎಂದರು ಈ ಸಂದರ್ಭದಲ್ಲಿ ಪರಶು ರಾಮಲು ಉಪಸ್ಥಿತರಿದರು.



ಶಿವನಗೌಡ ನಾಯಕ ವಿರುದ್ಧ ರಾಜಕೀಯ ಪ್ರೇರಿತ- ಖಂಡನೆ

ರಾಯಚೂರು,ಮಾ.23-

ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲಿ ಸಮಾಜ ಕಲ್ಯಾಣ ಸಚಿವರ ವಿರುದ್ಧ ಮಾಜಿ ಸಚಿವ ಶಿವನಗೌಡ ನಾಯಕ ಅವರ ಹೇಳಿಕೆ ಆಕ್ರೋಶ ಭರಿತವಾಗಿದೆ ಹೊರತು ವ್ಯಕ್ತಿಗತವಲ್ಲ, ಶಿವನಗೌಡ ನಾಯಕರ ವಿರುದ್ಧ ರಾಜಕೀಯ ತೇಜೋವಧೆ ಮಾಡು ತ್ತಿರುವುದು ಖಂಡನೀಯ ಎಂದು ವಕೀಲರಾದ ರಂಗನಾಥ ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವರಾದ ಮಹಾದೇವಪ್ಪ ಅವರು ಶಿವನಗೌಡ ನಾಯಕರ ಹೇಳಿಕೆಗೆ ವಿರುದ್ಧ ಯಾವುದೇ ಕಾನೂನಾತ್ಮಕ ಕ್ರಮ ಜರುಗಿಸದೇ ಸುಮ್ಮನಿದ್ದಾರೆ. ಆದರೆ ಕೆಲವರು

ಕೇವಲ ರಾಜಕೀಯ ತೇಜೋವಧೆಗಾಗಿ ಕೆ. ಶಿವನಗೌಡ ನಾಯಕರವರ ವಿರುದ್ಧ ಪ್ರತಿಭಟನೆ ಮಾಡುತ್ತಿರುವುದು ಹಾಸ್ಯಸ್ಪದ ಹಾಗೂ ಖಂಡನೀಯ ಎಂದರು. ಕೆ. ಶಿವನಗೌಡ ನಾಯಕರ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದ್ದರಿಂದ ಕೆಲ ರಾಜಕಾರಣಿಗಳು ಕುತಂತ್ರ ಮತ್ತು ಪ್ರಚೋದನೆಯಿಂದ ಈ ರೀತಿ ವರ್ತನೆ ಮಾಡುತ್ತಿದ್ದಾರೆ ಎಂದರು.ಒಂದು ವೇಳೆ ಅವರ ವಿರುದ್ಧ ರಾಜಕೀಯ ಪ್ರೇರಿತವಾಗಿ ದೂರು ದಾಖಲಿಸಿದರೆ ಅದನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರದ್ದುಗೊಳಿಸಲು ಪ್ರಕರಣ ದಾಖಲಿಸುತ್ತೇವೆ ಹೊರತು ಗೊಡ್ಡು ಬೆದರಿಕೆಗಳಿಗೆ ಯಾರು ಅಂಜುವುದಿಲ್ಲ ಮತ್ತು ಇಡೀ ಜಿಲ್ಲೆಯ ಜನ ಕೆ. ಶಿವನಗೌಡ ನಾಯಕರ ಪರವಾಗಿ ನಿಂತು ಪ್ರತಿಭಟನೆ ಮಾಡಲು ರೂಪ ರೇಷಗಳನ್ನು ಸಿದ್ದಗೊಳಿಸುತ್ತೇವೆ. ಕೆ ಶಿವನಗೌಡ ನಾಯಕರ ವಿರುದ್ಧ ಸುಳ್ಳು ಪ್ರಕರಣ ದಾಖಲಾದರೆ ಹೈಕೋರ್ಟ್ ನಲ್ಲಿ ರದ್ದುಪಡಿಸಲಾಗುವುದು ಎಂದರು.ಈ ಸಂದರ್ಭದಲ್ಲಿ ಲಾಲಪ್ಪ ನಾಯಕ,ರವಿ ಕುಮಾರ,ರಾಜಶೇಖರ,ಅರುಣ,ವೆಂಕಟೇಶ ಉಪಸ್ಥಿತರಿದ್ದರು.



ಭವಿಷ್ಯದ ಪೀಳಿಗೆಗೆ ಅಂತರ್ಜಲ ಮಟ್ಟ ಕಾಯ್ದುಕೊಳ್ಳಿ : ಭಂವರ್ ಸಿಂಗ್ ಮೀನಾ

ಕಲಬುರಗಿ,ಮಾ.23–

ನೀರು ಭೂಮಿಯ ಮೇಲಿನ ಜೀವಜಲವಾಗಿದ್ದು, ಇದು ರಾಷ್ಟ್ರೀಯ ಆಸ್ತಿ. ಆದ್ದರಿಂದ ಪ್ರತಿಯೊಬ್ಬರೂ ಮಿತವಾಗಿ ನೀರನ್ನು ಬಳಸುವುದರ ಜೊತೆಗೆ ಮಳೆನೀರು ಸಂಗ್ರಹಣೆ ಮೂಲಕ ಅಂತರ್ಜಲ ಮಟ್ಟವನ್ನು ಉಳಿಸಬೇಕು ಎಂದು ಜಿಲ್ಲಾ ಪಂಚಾಯತ್ ಸಿಇಒ ಭಂವರ್ ಸಿಂಗ್ ಮೀನಾ ಕರೆ ನೀಡಿದರು.

ರವಿವಾರ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ನಂದಿಕೂರ ಗ್ರಾಮ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಜಲ ದಿನ2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೈನಂದಿನ ಜೀವನದಲ್ಲಿ ನೀರಿನ ಮಹತ್ವವನ್ನು ಒತ್ತಿಹೇಳಿದ ಅವರು, ಅನಗತ್ಯವಾಗಿ ನಲ್ಲಿಗಳಿಂದ ನೀರು ಪೋಲಾಗದಂತೆ ಜಾಗೃತಿ ವಹಿಸಬೇಕು ಎಂದರು. ಮನೆ ಮಟ್ಟದಲ್ಲಿ ಸೋಕ್ ಪಿಟ್, ಸಮುದಾಯ ಮಟ್ಟದಲ್ಲಿ ಲೀಚ್ ಪಿಟ್, ರೀಚಾರ್ಜ್ ಪಿಟ್ ಹಾಗೂ ಮೇಲ್ಛಾವಣಿ ಮಳೆನೀರು ಸಂಗ್ರಹಣೆ ವ್ಯವಸ್ಥೆಗಳ ಬಗ್ಗೆ ಪ್ರಾಯೋಗಿಕ ಮಾಹಿತಿ ನೀಡಲಾಯಿತು.



ಜಿಲ್ಲೆಯಲ್ಲಿ ನೀರಿನ ಸಾಕ್ಷರತೆ, ಅಂತರ್ಜಲ ಸಂರಕ್ಷಣೆ ಹಾಗೂ ಸುಸ್ಥಿರ ನೀರಿನ ನಿರ್ವಹಣೆಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಗ್ರಾಮೀಣ ಪ್ರದೇಶಗಳಲ್ಲಿ ಕೆರೆ, ಬಾವಿ, ಕೊಳವೆಬಾವಿ ಸೇರಿದಂತೆ ಎಲ್ಲಾ ಜಲಮೂಲಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಕುಡಿಯುವ ನೀರಿನ ಪೂರೈಕೆಯಲ್ಲಿ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿ ವಹಿಸಬೇಕು ಎಂದು ಸೂಚಿಸಿದರು. ಕಲುಷಿತ ನೀರಿನಿಂದ ಯಾವುದೇ ಅನಾಹುತ ಸಂಭವಿಸಿದರೆ ಸಂಬಂಧಪಟ್ಟ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ ಎಂದು ಎಚ್ಚರಿಸಿದರು. ನೀರು ಪೂರೈಕೆ ವ್ಯವಸ್ಥೆಯಾದ ಓವರ್‌ಹೆಡ್ ಟ್ಯಾಂಕ್, ಪೈಪ್ಲೈನ್, ಕೊಳವೆಬಾವಿಗಳ ಸುತ್ತ ಸ್ವಚ್ಛತೆ ಕಾಪಾಡಬೇಕು. ನೀರು ಶುದ್ಧೀಕರಣಕ್ಕಾಗಿ ಕ್ಲೋರಿನೇಷನ್ ಹಾಗೂ ಬ್ಲೀಚಿಂಗ್ ಪೌಡರ್ ಬಳಸಬೇಕು. ಕೊಳವೆಬಾವಿಗಳಿಗೆ ಚರಂಡಿ ನೀರು ಸೇರುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು ಎಂದರು.

ಬೇಸಿಗೆ ಹಿನ್ನೆಲೆಯಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ತಕ್ಷಣ ದುರಸ್ತಿ ಕೈಗೊಳ್ಳಬೇಕು. ಅಗತ್ಯವಿದ್ದರೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುವುದು. ಜಿಲ್ಲಾ ಪಂಚಾಯತ್ ಬಳಿ 5 ಸರ್ಕಾರಿ ಟ್ಯಾಂಕರ್‌ಗಳು ಲಭ್ಯವಿವೆ ಎಂದು ತಿಳಿಸಿದರು.

ನೀರಿನ ಗುಣಮಟ್ಟ ಪರೀಕ್ಷಾ ಅಭಿಯಾನಕ್ಕೆ ಚಾಲನೆ :

ಕಾರ್ಯಕ್ರಮದ ವೇಳೆ ಫೀಲ್ಡ್ ಟೆಸ್ಟ್ ಕಿಟ್ ಮೂಲಕ ನೀರಿನ ಗುಣಮಟ್ಟ ಪರಿಶೀಲನೆ ಅಭಿಯಾನಕ್ಕೂ ಚಾಲನೆ ನೀಡಲಾಯಿತು. ನಂದಿಕೂರ ಗ್ರಾಮದಲ್ಲಿ ಆರ್‌ಓ ಪ್ಲಾಂಟ್, ಕೊಳವೆಬಾವಿ, ಟ್ಯಾಪ್ ಹಾಗೂ ಬಾವಿ ನೀರಿನ ಪರೀಕ್ಷೆ ನಡೆಸಿ ಅದರ ಫಲಿತಾಂಶವನ್ನು ಸಾರ್ವಜನಿಕರಿಗೆ ವಿವರಿಸಿದರು.

ಮಳೆಗಾಲದ ಮುನ್ನ ಹಾಗೂ ನಂತರ ನಿಯಮಿತವಾಗಿ ನೀರಿನ ಗುಣವಟ್ಟ ಪರಿಶೀಲನೆ ನಡೆಸಬೇಕು. ಜಲಮೂಲಗಳು ಕಲುಷಿತಗೊಂಡರೆ ಪರ್ಯಾಯ ಮೂಲಗಳಿಂದ ನೀರು ಪೂರೈಕೆ ಮಾಡಬೇಕು ಎಂದು ಅವರು ಸೂಚಿಸಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಸಹಾಯಕ ಕಾರ್ಯದರ್ಶಿ ರೇವಣಸಿದ್ದಪ್ಪ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇ.ಇ. ಜಗದೇವಪ್ಪ ಜೀವಣಗಿ, ಪಿ.ಡಿ.ಓ ಸಂದೀಪ ಗುತ್ತೇದಾರ ಹಾಗೂ ಇತರೆ ಸಿಬ್ಬಂದಿಗಳಿದ್ದರು.



ಸಿದ್ದರಾಮೇಶ್ವರ ಜಾತ್ರೆ: ಪಲ್ಲಕ್ಕಿ ಉತ್ಸವ

ಬೀದರ್,ಮಾ.23– ಬೇಲೂರು ಕಲ್ಯಾಣ ಕಟ್ಟಿಮನಿ ಹಿರೇಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಈ ಉತ್ಸ ವ, ಗ್ರಾಮದ ನಾಗಲಿಂಗೇಶ್ವರ ದೇವಾಲಯದ ಸಮ್ಮುಖದಿಂದ ಪ್ರಾರಂಭವಾಗಿ ಪ್ರಮುಖ ಬೀದಿಗಳ ಮೂಲಕ ಸಂಚರಿಸಿ, ಸಿದ್ದರಾಮೇಶ್ವರ ದೇವಾಸ್ಥಾನದ ಗರ್ಭಗುಡಿಯಲ್ಲಿ ಸಮಾಪ್ತಿಯಾಯಿತು.

ಮೆರವಣಿಗೆಯಲ್ಲಿ ಮೈಸೂರು ವೀರಗಾಸೆ, ಡೊಳ್ಳು ಕುಣಿತ, ಲಂಬಾಣಿ ನೃತ್ಯ, ಮಹಿಳೆಯರ ಕೋಲಾಟ ಹಾಗೂ ಕುಂಭ ಹೊತ್ತು ಸಾಗಿದ ಭಕ್ತರ ದೃಶ್ಯಗಳು ಗಮನಸೆಳೆದವು. ದಾರಿಯುದ್ದಕ್ಕೂ ಸಿದ್ದರಾಮೇಶ್ವರರ ಜಯ ಘೋಷಣೆಗಳು ಮೊಳಗಿದವು. ಜಾತ್ರಾ ಮಹೋತ್ಸವದ ಅಂಗವಾಗಿ ಭಾಗವಹಿಸಿದ ಕಲಾವಿದರಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.

ಬಸವಕಲ್ಯಾಣ ಬಿಜೆಪಿ ತಾಲ್ಲೂಕು ಅಧ್ಯಕ್ಷ ಜ್ಞಾನೇಶ್ವರ ಮೂಳೆ, ಸಿದ್ರಾಮ ಕಾಮಣ್ಣ, ಸೂರ್ಯಕಾಂತ ಚಿಲ್ಲಾಬಟೆ, ಸಿದ್ದು ಪಾಟೀಲ, ಶರಣಯ್ಯ ಸ್ವಾಮಿ, ನಿತ್ಯಾನಂದ ಸ್ವಾಮಿ, ದೇವಾಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ ಮೆಂಡೋಳೆ, ಉಪಾಧ್ಯಕ್ಷ ದೇವಿಂದ್ರ ಉದಾನೆ, ಚನ್ನವೀರ ಸ್ವಾಮಿ, ರಾಜಪ್ಪ ಪಾಟೀಲ್, ನಾಗನಾಥ ಭೇಟಿ, ಸಂಗಪ್ಪ ಜವಳಗೆ, ಮೊಡಳಪ್ಪ ಗುಂಡರೆ, ಮೊಡಳಪ್ಪ ಹೊಳ್ಳೆ, ರಾಜು ಸ್ವಾಮಿ, ಹರ್ಷವರ್ಧನ್ ಅಳ್ಳೆ, ಹುಲೆಪ್ಪ ಪಾಟೀಲ, ಮಹಾದೇವ ಮಹಾಜನ, ಪಪ್ಪು ಉದಾನೆ, ಸಂತೋಷ ವಕಾರೆ, ಸಂದೀಪ ಬಿರಾದಾರ, ಭೀಮಣ್ಣ ಗೋದಹಿಪರಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ದೌರ್ಜನ್ಯ ಪ್ರತಿಬಂಧ ಅಸ್ಪೃಶ್ಯತೆ ನಿವಾರಣೆ ಬೀದಿ ನಾಟಕ ಪ್ರದರ್ಶನ

ಕನಕಗಿರಿ ದೌರ್ಜನ್ಯ ಪ್ರತಿಬಂಧ ಅಸ್ಪೃಶ್ಯತೆ ನಿವಾರಣೆ ಬೀದಿ ನಾಟಕ ಪ್ರದರ್ಶನ

ಕನಕಗಿರಿ,ಮಾ.23–

ಇಲ್ಲಿನ ಶ್ರೀ ವಿಶ್ವಜ್ಞಾನಿ ಡಾ. ಬಿ ಆರ್. ಅಂಬೇಡ್ಕರ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವತಿಯಿಂದ ತಾಲೂಕಿನ ನವಲಿ ಗ್ರಾಮದಲ್ಲಿ ದೌರ್ಜನ್ಯ ಪ್ರತಿಬಂಧ ಅಸ್ಪೃಶ್ಯತೆ ನಿವಾರಣೆ ಬೀದಿ ನಾಟಕ ಪ್ರದರ್ಶನ ಬುಧವಾರ ಪ್ರದರ್ಶನ ಗೊಂಡಿತು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಕೊಪ್ಪಳ ಹಾಗೂ ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ಸಹಯೋಗದಲ್ಲಿ ನಡೆದ ಬೀದಿನಾಟಕಕ್ಕೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೀರಣ್ಣ ನೆಕ್ರಳ್ಳಿ ಅವರು ಹಲಗಿ ಬಡಿಯುವ ಮೂಲಕ ಚಾಲನೆ ನೀಡಿದರು.

ವೀರಣ್ಣ ನೆಕ್ರಳ್ಳಿ ಮಾತನಾಡಿ, ಕಾನೂನು ಮುಂದೆ ಎಲ್ಲರೂ ಸಮಾನರಾಗಿದ್ದು, ಅಸ್ಪೃಶ್ಯತೆ ಆಚರಣೆ ಕಾನೂನು ವಿರುದ್ಧವಾಗಿದೆ, ಇಂಥ ಆಚರಣೆ ನಡೆಯಬಾರದು ಎಂಬ



ಕಾರಣಕ್ಕೆ ಸರಕಾರ ಬೀದಿನಾಟಕಗಳ ಮೂಲಕ ಜಾಗೃತಿ ಮೂಡಿಸುತ್ತಿದೆ. ಪ್ರತಿಯೊಬ್ಬರು ಸಮಾನತೆಯ ತತ್ವವನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಬೇಕೆಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಪಾಮಣ್ಣ ಅರಳಿಗನೂರು ಮಾತನಾಡಿ, ದೇಶ ಸ್ವಾತಂತ್ರ್ಯ ಗಳಿಸಿ ಏಳು ದಶಕಗಳು ಉರುಳಿದರೂ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ, ಇಂಥ ಅನಿಷ್ಠ ಪದ್ಧತಿ ಶಿಕ್ಷಣದಿಂದ ಹೋಗಲಾಡಿಸಲು ಸಾಧ್ಯವಿದೆ ಎಂದರು.

ಗ್ರಾಮೀಣ ಭಾಗದಲ್ಲಿ ಸಹಜೀವನ, ಸೌಹಾರ್ದ ಮುಖ್ಯವಾಗಿದೆ ಇಂಥ ಬೀದಿ ನಾಟಕಗಳು ಇಂಥ ಬದುಕಿಗೆ ಪ್ರೇರಣೆ ನೀಡುತ್ತವೆ ಎಂದರು. ಸಮಾಜ ಕಲ್ಯಾಣ ಇಲಾಖೆಯ ನಿಲಯ ಪಾಲಕ ಪಂಪನಗೌಡ ಸಂವಿಧಾನ ಪೀಠಿಕೆ ಓದಿದರು. ರಜನಿ ಆರತಿ ಕ್ರಾಂತಿ ಗೀತೆ ಹಾಡಿದರು. ಹುಲಿಹೈದರ ಗ್ರಾಮದಲ್ಲೂ ಬೀದಿನಾಟಕ ಪ್ರದರ್ಶನ ಗೊಂಡಿತು. ಗ್ರಾಪಂ ಮಾಜಿ ಸದಸ್ಯರಾದ ಬೆಟ್ಟಪ್ಪ ಜೀರಾಳ, ಚಂದ್ರಶೇಖರ ಸೂಡಿ, ವೀರೇಶ ತಳವಾರ ತಿಮ್ಮಣ್ಣ, ಸಣ್ಣ ಹನುಮಂತ ಕನಕಾಚಲ ನಾಯಕ, ಇತರರು ಇದ್ದರು.

ಮಲಘಾಣ ಯಲ್ಲಾಲಿಂಗೇಶ್ವರ ಭವ್ಯ ರಥೋತ್ಸವ

ಕಾಳಗಿ,ಮಾ.23–

ತಾಲೂಕಿನ ಮಲಘಾಣ ಗ್ರಾಮದಲ್ಲಿ ಮುಗಳಖೋಡ ಜಿಡಗಾ ಮಠದ ಶಾಖಾ ಮಠವಾದ ಯಲ್ಲಾಲಿಂಗಾಶ್ರಮದಲ್ಲಿ ರವಿವಾರ ರಾತ್ರಿ ಯಲ್ಲಾಲಿಂಗೇಶ್ವರ ಜಾತ್ರಾ ಮಹೋತ್ಸವವು ಅಪಾರ ಭಕ್ತ ಸಮೂಹದ ಮಧ್ಯೆ ಸಡಗರ ಸಂಭ್ರಮದಿಂದ ಜರುಗಿತು.

ಜಾತ್ರಾ ಮಹೋತ್ಸವ ನಿಮಿತ್ತ ಗ್ರಾಮದ ಮುಖಂಡರು, ಮಹಿಳೆಯರು ಡೊಳ್ಳು ಭಾಜಾ-ಭಜಂತ್ರಿ, ವಾದ್ಯಮೇಳಗಳೊಂದಿಗೆ ಯಲ್ಲಾಲಿಂಗೇಶ್ವರ ಪಲಕ್ಕಿ ಉತ್ಸವ ಹಳ್ಳಕ್ಕೆ ತೆರಳಿ ಗಂಗಾ ಸ್ನಾನ ನೆರವೇರಿತು. ನಂತರ ಕುಂಭ, ಕಳಸದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಯಲ್ಲಾಲಿಂಗೇಶ್ವರ ಪಲ್ಲಕ್ಕಿ ಮೆರವಣಿಗೆ ಹೊರಟು ದೇವಸ್ಥಾನಕ್ಕೆ ತಲುಪಿತು.

ಸಂಜೆ ಸಮಯದಲ್ಲಿ ಪೇಠ ಶಿರೂರ ಸಿದ್ದಲಿಂಗ ಮಹಾಸ್ವಾಮಿಗಳು ಹಾಗೂ ಅಮೋಘಸಿದ್ಧ ಮಹಾರಾಜರ ಅಮೃತ ಹಸ್ತದಿಂದ



ಯಲ್ಲಾಲಿಂಗೇಶ್ವರ ಕರ್ತೃ ಗದ್ದುಗೆ ಹಾಗೂ ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ನೆರೆದಿದ್ದ ಸಾವಿರಾರು ಭಕ್ತರು 'ಯಲ್ಲಾಲಿಂಗ ಮಹಾರಾಜ ಕೀ ಜೈ' ಎಂದು ಜಯಘೋಷಣೆ ಕೂಗುತ್ತಾ ರಥ ಎಳೆದರು. ರಥ ಸ್ಥಳ ಬೀಡುತ್ತಿದ್ದಂತೆ ಭಕ್ತರು ತೇರಿನತ್ತ ಉತ್ತುತ್ತಿ, ಖಾರಿಕ, ಬಾಳೆಹಣ್ಣು, ನಾಣ್ಯ ಎಸೆದು ಭಕ್ತಿ ಸಮರ್ಪಿಸಿದರು.

ನಂತರ ನಡೆದ ಧಾರ್ಮಿಕ ಕಾರ್ಯಕ್ರಮ ಉದ್ದೇಶಿಸಿ ಪೇಠ ಶಿರೂರ ಸಿದ್ದಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಯಲ್ಲಾಲಿಂಗ ಮಹಾರಾಜರು ನಿರ್ಮಾಣ ಮಾಡಿರುವ ಕೆಲವೆ ಮಠಗಳಲ್ಲಿ ಮಲಘಾಣ ಗ್ರಾಮದ ಮಠವೂ ಒಂದಾಗಿದೆ. ಯಲ್ಲಾಲಿಂಗ ಮಹಾರಾಜರು ದೈವತ್ವದಿಂದ ಅನೇಕ ಭಕ್ತರ ಬಾಳಿಗೆ ಬೆಳಕನ್ನು ತಂದಿದ್ದಾರೆ ಎಂದು ಹೇಳಿದರು.

ಅಮೋಘಸಿದ್ಧ ಮಹಾರಾಜರು, ಪ್ರಮುಖರಾದ ಸುರೇಶ ನಾಮದಾರ, ವಿಠ್ಠಲ ಹಿರಿಪೂಜಾರಿ, ಮಾಜಿ ಜಿಲ್ಲಾ ಪರಿಷತ್ ಅಧ್ಯಕ್ಷ ರೇವಣಸಿದ್ದಪ್ಪ ಬಾಗೋಡಿ, ಸಿದ್ದರಾಮು ಹಳ್ಳಿ, ಪ್ರವೀಣ ನಾಮದಾರ, ಬಸವರಾಜ ಹಲಚೇರಿ, ಶಂಕರ್ ಕೊಡ್ಲಿ, ಪವಾನ ನಾಮದಾರ, ನಾಗೇಶ ಪಾಪಣೆ, ಸಿದ್ದು ಕೊಡ್ಲಿ, ಮಾರಿತಿ ಕೊಡ್ಲಿ, ಶ್ರೀಮಂತ ನಾಮದಾರ, ಜಗದೇವಪ್ಪ ಪಾಟೀಲ, ಕಿಶನರಾವ್ ಕುಲಕರ್ಣಿ, ಮಹಾದೇವ ಚಂದನಕೇರಿ, ಮಲ್ಲಿಕಾರ್ಜುನ ಭಾವಿಮನಿ, ಶರಣಪ್ಪ ಹಿಪ್ಪರಗೇರಿ, ಸಿದ್ದರಾಮು ಮಾಲಿಪಾಟೀಲ, ಪೃಥ್ವಿರಾಜ್ ನಾಮದಾರ, ದೊಂಡಿಬಾ ಪಾಟೀಲ, ಅರ್ಜುನ ಚಂದನಕೇರಿ, ಸುನೀಲ ಹಲಚೇರಿ, ಭಾಗ್ಯವಂತ ಕೊಡ್ಲಿ ಸೇರಿದಂತೆ ಕಲಗುರ್ತಿ, ಡೊಣ್ಣೂರ, ಕಣಸೂರ, ಅಶೋಕ ನಗರ, ಕೋರವಾರ, ಟೆಂಗಳಿ, ಅರಜಂಬಗಾ, ಕಾಳಗಿ, ಸಾಲಹಳ್ಳಿ, ಕೊಡ್ಲಿ ಗ್ರಾಮಗಳ ಅನೇಕ ಭಕ್ತರು ಇದ್ದರು.

ಚಂದುಕಾಕಾ ಸರಾಫ್ ಆಭರಣ ಮಳಿಗೆ ಉದ್ಘಾಟನೆ



ಕಲಬುರಗಿ,ಮಾ.23–

ಆ ಮೂಲಕ ಚಂದುಕಾಕಾ ಸರಾಫ್ ಆಭರಣ ಮಳಿಗೆಯು ಕಲ್ಯಾಣ ಕರ್ನಾಟಕದಲ್ಲಿ ಮೊದಲ ಮಳಿಗೆಯನ್ನು ತೆರೆದಂತಾಗಿದೆ.

ಶಾಸಕರಾದ ಅಲ್ಲಮಪ್ರಭು ಪಾಟೀಲ, ಬಸವರಾಜ ಮತ್ತಿಮಡು, ಮೇಯರ್ ವರ್ಷಾ ಜಾನೆ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜ ದೇಶಮುಖ, ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶರಣಕುಮಾರ ಮೋದಿ, ಕಾಂಗ್ರೆಸ್ ಮುಖಂಡ ನೀಲಕಂಠರಾವ್ ಮೂಲಗೆ, ಸಮಾಜ ಸೇವಕಿ ಜಯಶ್ರೀ ಮತ್ತಿಮಡು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಹೊಸ ಮಳಿಗೆಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂದೆ, ಮಹಾ ರಾಷ್ಟ್ರದಲ್ಲಿ ಪ್ರಖ್ಯಾತಿಯಾಗಿರುವ ಚಂದುಕಾಕಾ ಸರಾಫ್‌ನವರು ಕಲಬುರಗಿಯಲ್ಲಿ ತಮ್ಮ ಮಳಿಗೆ ತೆರೆಯುತ್ತಿರುವುದು ಶ್ಲಾಘನೀಯ. ಇಲ್ಲಿನ ಗ್ರಾಹಕರಿಗೆ ಗುಣಮಟ್ಟದ ಚಿನ್ನಾಭರಣಗಳನ್ನು ತಯಾರಿಸಿ ಕೊಡಬೇಕು. ಉತ್ತಮ ಸೇವೆ ಸಲ್ಲಿಸಬೇಕು ಎಂದು ಆಶಿಸಿದರು.

ಜೆಡಿಎಸ್ ಮುಖಂಡ ಕೃಷ್ಣಾ ರೆಡ್ಡಿ ಮಾತನಾಡಿ, ಕಲ್ಯಾಣ ಕರ್ನಾಟಕದ ಹೆಬ್ಬಾಗಿಲಾಗಿರುವ ಕಲಬುರಗಿಯಲ್ಲಿ ವಿವಿಧ ಬ್ರ್ಯಾಂಡ್‌ನ ಆಭರಣ ಮಳಿಗೆಗಳು ತಮ್ಮ ಶಾಖೆಗಳನ್ನು ತೆರೆಯುತ್ತಿರುವುದು ಶ್ಲಾಘನೀಯ. ಯುಗಾದಿಯ ದಿನದಂದೇ ಮಳಿಗೆ ಆರಂಭವಾಗಿದ್ದರೆ ನಾನೇ ಮೊದಲ ಗ್ರಾಹಕನಾಗಿರುತ್ತಿದ್ದೆ ಎಂದರು.

ಚಂದುಕಾಕಾ ಸರಾಫ್‌ನ ಚೇರಮನ್ ಕಿಶೋರಕುಮಾರ್ ಜಿನದತ್ತ ಶಹಾ ಮಾತನಾಡಿ, 200 ವರ್ಷಗಳ ಇತಿಹಾಸ ಹೊಂದಿರುವ ಚಂದುಕಾಕಾ ಸರಾಫ್‌ನ ಮಳಿಗೆಯನ್ನು ಕಲಬುರಗಿಯಲ್ಲಿ ಬಹಳ ದಿನಗಳಿಂದ ತೆರೆಯಬೇಕು ಎಂದು ಆಶಿಸಿದ್ದೆವು. ಅದು ಇದೀಗ ಸಾಕಾರಗೊಂಡಿದೆ. ಮಾ.22ರಿಂದ ಮಾ.31 ರವರೆಗೆ ವಿಶೇಷ ರಿಯಾಯಿತಿಗಳನ್ನು ನೀಡುತ್ತಿದ್ದು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ರಿಯಾಯಿತಿಯ ಲಾಭ ಪಡೆಯಬೇಕು. ಅತ್ಯಂತ ಶುದ್ಧ ಚಿನ್ನವನ್ನು ನೀಡುವುದು ನಮ್ಮ ಮಳಿಗೆಗಳ ವಿಶೇಷವಾಗಿದೆ ಎಂದು ಹೇಳಿದರು.

ಸಂಸ್ಥೆಯ ನಿರ್ದೇಶಕಿ ನೇಹಾ ಕಿಶೋರಕುಮಾರ್ ಶಹಾ, ವ್ಯವಸ್ಥಾಪಕ ನಿರ್ದೇಶಕ ಸಮ್ಯಕ್ ಕಿಶೋರಕುಮಾರ್ ಶಹಾ ಭಾಗವಹಿಸಿದ್ದರು.



ಪ್ರತಿ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ

ಬೀದರ್,ಮಾ.23– ತಾಲ್ಲೂಕಿನ ಬೋಂತಿಯಲ್ಲಿ ಘಮಸುಬಾಯಿ ತಾಂಡಾದಲ್ಲಿ ಶನಿವಾರ ಸಂಜೆ ನಡೆದ ಸಮಾಜದ ಚಿಂತನ-ಮಂಥನ ಸಭೆಯಲ್ಲಿ ಅವರು ಮಾತನಾಡಿದರು.

ಪರಿಶಿಷ್ಟ ಸಮುದಾಯ ವಾಸಿಸುವ ಪ್ರತಿಯೊಂದು ಗ್ರಾಮದಲ್ಲೂ ಸಮುದಾಯ ಭವನ ನಿರ್ಮಾಣ ಮಾಡುವ ಬೇಡಿಕೆ ಇದ್ದು, ಶೀಘ್ರದಲ್ಲಿ ಅದಕ್ಕೆ ಸ್ಪಂದನೆ ಸಿಗಲಿದೆ. ತಾವು ಕೂಡ ದಲಿತ ಸಮುದಾಯದವರಾಗಿದ್ದು, ನಮ್ಮ ಸಮುದಾಯ ಅಭಿವೃದ್ಧಿಗೆ ಸದಾ ಬದ್ಧ ಎಂದು ಹೇಳಿದರು.

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳಾಗಿ, ವೈದ್ಯರು ಮತ್ತು ಎಂಜಿನಿಯರ್‌ಗಳಾಗಿ ಹೊರಬರಬೇಕು ಎಂಬುದು ನನ್ನ ಕನಸಾಗಿದೆ. ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಹಾಗೂ ವಿದ್ಯಾರ್ಥಿಗಳು ಉನ್ನತ ಗುರಿಗಳನ್ನು ಹೊಂದಿ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು. ಮುಖಂಡ ಅರಹಂತ ಸಾವಳೆ, ಸೂರ್ಯಕಾಂತ ಸಿಂಗೆ ಔರಾದ್ ಪಟ್ಟಣದಲ್ಲಿ ಡಾ. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಆಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಬಾಲಾಜಿ ಕಾಳೆಕರ್, ನಾರಾಯಣ ವಾಘಮಾರೆ, ಪ್ರಕಾಶ ಭಂಗಾರೆ, ಸಂಜುಕುಮಾರ ಡೊಂಗ್ರೆ, ಸಂತೋಷ ಜೊನ್ನಿಕೇರಿ, ಸಿದ್ಧಾರ್ಥ ರಾಜುರೆ, ಸಂತೋಷ ಕಾಂಬಳೆ, ಶಿವರಾಜ ಝುಲಾಂಡೆ, ಸೋಪಾನರಾವ ಡೊಂಗ್ರೆ, ರಮೇಶ ಶೆಳಕೆ, ತುಳಸಿರಾಮ ಬೇಂದ್ರೆ, ಸುಧಾಮ ಭಾಸ್ಕರ್, ದಿಲೀಪ ಸೋಮವಂಶಿ, ಕಿರಣ ಮಾರ್ತಾಂಡ್, ಹರಿ ಮದನೂರ ಇದ್ದರು.

ಕುಡಿಯುವ ನೀರಿನ ಸಮಸ್ಯೆ: ಜನರಿಗೆ ಸಂಕಷ್ಟ

ಔರಾದ್,ಮಾ.23–

ದಶಕಗಳಿಂದಲೂ ಕುಡಿಯುವ ನೀರಿನ ಕೊರತೆಯನ್ನು ಎದುರಿಸುತ್ತಿರುವ ಔರಾದ್ ಪಟ್ಟಣದ ಜನರು ಇನ್ನೂ ಸಂಕಷ್ಟದಲ್ಲೇ ಜೀವನ ಸಾಗಿಸುತ್ತಿದ್ದಾರೆ. ಹಲವು ಸರ್ಕಾರಗಳು ಬದಲಾದರೂ, ಕೋಟಿಗಟ್ಟಲೇ ಹಣ ವ್ಯಯವಾದರೂ ಕುಡಿಯುವ ನೀರಿನ ಸಮಸ್ಯೆಗೆ ಮಾತ್ರ ಶಾಶ್ವತ ಪರಿಹಾರ ಸಿಗದೆ ಜನ ಕಂಗಾಲಾಗಿದ್ದಾರೆ.

20 ವರ್ಷಗಳ ಹಿಂದೆ 5 ಕಿ.ಮೀ. ದೂರದ ತೇಗಂಪೂರ ಕೆರೆಯಿಂದ ಔರಾದ್ ಪಟ್ಟಣಕ್ಕೆ ನೀರು ತರುವ ಯೋಜನೆ ಆಗಿದೆ. ನಂತರ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಮಾಂಜ್ರಾ ನದಿಯಿಂದ ಔರಾದ್‌ಗೆ ನೀರು ತರುವ ಸುಮಾರು ₹30 ಕೋಟಿ ಯೋಜನೆ ಜಾರಿಗೆ ಬಂದಿದೆ. ಕೆಲ ವರ್ಷಗಳ ಹಿಂದೆ ಪಟ್ಟಣದಲ್ಲಿ ಪೈಪ್‌ಲೈನ್‌ಗಾಗಿ ₹5 ಕೋಟಿ ಖರ್ಚು ಆಗಿದೆ. ಇಷ್ಟೆಲ್ಲ ಹಣ ವ್ಯಯವಾದರೂ ಪಟ್ಟಣದ ಜನರು ಮಾತ್ರ ನೀರಿನ ಬರದ ಬವಣೆಯಿಂದ ಹೊರ ಬಾರದೆ ಒದ್ದಾಡುತ್ತಿದ್ದಾರೆ.

ಇಷ್ಟು ವರ್ಷಗಳಾದರೂ ನಮ್ಮ ಗಲ್ಲಿಗೆ ಯಾವುದೇ ನೀರಿನ ಯೋಜನೆಯ ಲಾಭ ಸಿಕ್ಕಿಲ್ಲ. ಐದು ದಶಕದಿಂದಲೂ ವಜ್ಜರ್ ಬಾವಿ



ನೀರು ಬರುತ್ತದೆ. ಆದರೆ ಅದೂ ಈಗ ಸರಿಯಾಗಿ ಬರುತ್ತಿಲ್ಲ. ಇದರಿಂದ ನಮಗೆ ಬಹಳ ಸಂಕಟ ಆಗಿದೆ. ನಾವು ನಿಮಗೆ ನೀರು ಬಿಟ್ಟು ಮತ್ತೇನು ಕೇಳುತ್ತಿಲ್ಲ ಎಂದು ವಾರ್ಡ್-2ರ (ಖೂಬಾ ಗಲ್ಲಿ) ಮಹಿಳೆಯರು ಈಚೆಗೆ ತಹಶೀಲ್ದಾರ್ ಕಚೇರಿಗೆ ಹೋಗಿ ತಮ್ಮ ಗೋಳು ತೋಡಿಕೊಂಡಿದ್ದಾರೆ.

ತೇಗಂಪೂರ ಹಾಗೂ ಹಾಲಹಳ್ಳಿ ಬ್ಯಾರೇಜ್‌ನ ಎರಡು ಯೋಜನೆಗಳಿದ್ದರೂ ಜನರಿಗೆ ಶುದ್ಧ ಹಾಗೂ ನಿಯಮಿತ ನೀರು ಪೂರೈಕೆಯಾಗುತ್ತಿಲ್ಲ. ಕೆಲ ಗಲ್ಲಿಗೆ ನಾಲ್ಕು ದಿನಕ್ಕೊಮ್ಮೆ ಹಾಗೂ ಇನ್ನು ಕೆಲ ಕಡೆ ವಾರಗಟ್ಟಲೇ ನೀರು ಬರುವುದಿಲ್ಲ. ಹೀಗಾಗಿ ಬೇಸಿಗೆ ಮೂರು ತಿಂಗಳು ಟ್ಯಾಂಕರ್ ಖರೀದಿ ಅನಿವಾರ್ಯವಾಗಿದೆ ಎನ್ನುತ್ತಾರೆ ಪಟ್ಟಣದ ನಿವಾಸಿಗಳು. ಸಂಬಂಧಿತರ ನಿರ್ಲಕ್ಷ್ಯ, ಸಮರ್ಪಕ ನಿರ್ವಹಣೆ ಕೊರತೆ, ತಾಂತ್ರಿಕ ದೋಷಗಳು ಕುಡಿಯುವ ನೀರಿನ ಸಮಸ್ಯೆಗೆ ಮೂಲ ಕಾರಣವಾಗಿದೆ.

ತತ್ವಜ್ಞಾನದಲ್ಲಿ ನಿಪುಣ ಮಾಧವ ತೀರ್ಥರು

ಕಲಬುರಗಿ,ಮಾ.23–

ನಗರದ ಸಂಗಮೇಶ್ವರ ಬಡಾವಣೆಯ ಸೂರ್ಯನಾರಾಯಣ ದೇವಸ್ಥಾನದ ಯಾಜ್ಞವಲ್ಕ್ಯ ಭವನದಲ್ಲಿ ಶ್ರೀಮದ್ ಕಣ್ವ ಮಠದ ಸಂಸ್ಥಾಪಕರಾದ ಮಾಧವ ತೀರ್ಥರ 216ನೇ ಆರಾಧನಾ ಮಹೋತ್ಸವದ ಅಂಗವಾಗಿ ಭಾನುವಾರ ನಡೆದ ವಿಶೇಷ ಪಾರಾಯಣದಲ್ಲಿ ಅವರು ಮಾತನಾಡಿದರು.



ಮಹರ್ಷಿ ಯಾಜ್ಞವಲ್ಕ್ಯ ಹಾಗೂ ಮಹರ್ಷಿ ಕಣ್ವರಿಂದ ಬಂದ ಶುಕ್ಲ ಯಜುರ್ವೇದದ ಜ್ಞಾನವನ್ನು ಜನಸಾಮಾನ್ಯರಿಗೆ ಬೋಧಿಸಿ, ಸ್ವಧರ್ಮಾಚರಣೆಯ ಮಹತ್ವವನ್ನು ಸಾರಿದರು ಎಂದರು.

ಸಮಿತಿಯ ಹಿರಿಯ ಸದಸ್ಯ ವೆಂಕಟೇಶ ಕುಲಕರ್ಣಿ ಮಾತನಾಡಿ, ರಾಯಚೂರು ಜಿಲ್ಲೆಯ ಮುಸ್ಕಿ ತಾಲ್ಲೂಕಿನ ಬುದ್ದಿನ್ನಿ ಗ್ರಾಮದಲ್ಲಿರುವ ಮಾಧವ ತೀರ್ಥರ ವೃಂದಾವನಕ್ಕೆ ಕಲಬುರಗಿಯ ಯೋಗೀಶ್ವರ ಯಾಜ್ಞವಲ್ಕ್ಯ ಸಮಿತಿಯ ವತಿಯಿಂದ ಭಕ್ತರೊಂದಿಗೆ ಯಾತ್ರೆ ಆಯೋಜಿಸಲಾಗಿದ್ದು, ದರ್ಶನ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಶ್ರೀಮನ್ ಮಾಧವ ತೀರ್ಥರ ಅಷ್ಟೋತ್ತರ ಪಾರಾಯಣ ಹಾಗೂ 108 ಚರಮ ಶ್ಲೋಕ ಪಠಣೆ ನಡೆಯಿತು. ವಾಸುದೇವರಾವ್ ಕುಳಗೇರಿ, ವೆಂಕಟೇಶ ಕುಲಕರ್ಣಿ, ಸತ್ಯನಾರಾಯಣ ಕುಲಕರ್ಣಿ, ಶಂಕರರಾವ ಕುಲಕರ್ಣಿ, ವಿನುತ ಜೋಶಿ, ವ್ಯವಸ್ಥಾಪಕ ಶ್ರೀನಿವಾಸರಾವ ಕುಲಕರ್ಣಿ ಭಾಗವಹಿಸಿದ್ದರು.

ಸತ್ಯ, ಧರ್ಮದಿಂದ ನಡೆದರೆ ನೆಮ್ಮದಿ

ಬಾಗಲಕೋಟೆ,ಮಾ.23–

ಸಮೀಪದ ರೈನಾಪೂರ ಗ್ರಾಮದ ಶ್ರದ್ಧಾನಂದ ಸ್ವಾಮೀಜಿ ಮಠದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಶಾಂತಿಗಾಗಿ ನಡೆಯಲಿರವ ಜಪಯಜ್ಞ ಮತ್ತು ವೇದಾಂತ ಮಹೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಅನಗವಾಡಿ ಆಶ್ರಮದ ಮಾತೋಶ್ರೀ ಅನುಸೂಯಾತಾಯಿ ಮಾತನಾಡಿ ,ಧಾರ್ಮಿಕ ಆಚಣೆಗಳು



ಮಾನವನಲ್ಲಿ ಚೈತನ್ಯ ಮೂಡಿಸಿ ಶಾಂತಿಯ ಸನ್ಮಾರ್ಗ ತೋರುತ್ತದೆ ಎಂದು ಹೇಳಿದರು.

ಗೊಡಗೇರಿ ಮಠದ ಮಲ್ಲಯ್ಯ ಸ್ವಾಮೀಜಿ, ಶಿಂದೋಗಿ ಮಠದ ಮುಕ್ತಾನಂದ ಸ್ವಾಮೀಜಿ, ಹಂಚಿನಾಳ ಮಠದ ಮಹೇಶಾನಂದ ಸ್ವಾಮೀಜಿ, ಮಾತೋಶ್ರೀ ಜಾನಮ್ಮತಾಯಿ, ಪ್ರಥಮ ದರ್ಜೆ ಗುತ್ತಿಗೆದಾರ, ಭೀಮಪ್ಪ ಜೋಗಿ, ರೈನಾಪೂರ ಶ್ರದ್ಧಾನಂದ ಮಠದ ಮಾತೋಶ್ರೀ ಗೋಪಾಲ ಕಡೆಮನಿ ಇದ್ದರು.

ಒಂದನೇಯ ಪುಟದಿಂದ

ದಿ.25: ವಿಶ್ವಕರ್ಮರನ್ನು ಎಸ್.ಟಿ.ಗೆ ಸೇರ್ಪಡೆ ಆಗ್ರಹಿಸಿ ಪಂಜಿನ ಮೆರವಣಿಗೆ

ವಿಶ್ವಕರ್ಮ ನೌಕರರ ಸಂಘ, ಈ ಪಂಜಿನ ಮೆರವಣಿಗೆಯನ್ನು ಬೆಂಬಲಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ರಾಜ್ಯಾಧ್ಯಕ್ಷರಾದ ಕೆ.ಪಿ. ನಂಜುಂಡಿ ವಿಶ್ವಕರ್ಮ ಇವರನ್ನು ಅಹ್ವಾನಿಸಲಾಗಿದೆ. ಈ ಸಂದರ್ಭದಲ್ಲಿ ಬ್ರಹ್ಮ ಗಣೇಶ ವಕೀಲರು, ಎ. ಈಶ್ವರ ವಿಶ್ವಕರ್ಮ, ಮೋನಪ್ಪ ವಡವಾಟಿ ಸುರೇಶ ಸಗಮಕುಂಟ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿ ಹಿಂಪಡಿಯದಿದ್ದರೆ ಪರಿಶಿಷ್ಟಜಾತಿ ವರ್ಗೀಕರಣ ಅಸಾಧ್ಯ -ಮಹೇಂದ್ರ ಕುಮಾರ ಮಿತ್ರ

ಒಳಮೀಸಲಾತಿ ಜಾರಿ ಮಾಡದಿದ್ದರೆ, ಮಾದಿಗರು ವಿದ್ಯಾಭ್ಯಾಸ ಮಾಡಿದರೆ ಈಗಾಗಿರುವ ಮಿಸಲಾತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಪಡೆಯುವುದು ಎಂದರು

ಪರಿಶಿಷ್ಟ ಜಾತಿಯವರಿಗೆ ಈಗಿರುವ ಶೇ. 15 ರ ಸಂಪೂರ್ಣ ಮೀಸಲಾತಿ ಪಡೆದು ಮತ್ತು ಸಾಮಾನ್ಯ ವರ್ಗಕ್ಕೆ ಮೀಸಲಿಟ್ಟ ಶೇ.4 ರಷ್ಟು ಮಿಸಲಾತಿ ಸಂಪೂರ್ಣ ಪಡೆದು ಒಟ್ಟು ಶೇ.55 ರಷ್ಟು ಮಿಸಲಾತಿ

ಪಡೆದರೆ ಮಾದಿಗ ಸಮಾಜವು ಅರ್ಥಿಕವಾಗಿ ಸಮಾಜದ ಮುಖ್ಯವಾಹಿನಿಗೆ ಬರುವ ಸಾಧ್ಯತೆ ಇದೇ ಎಂದರು. ಮಾದಿಗ ಸಮುದಾಯಕ್ಕೆ ಶೇ. 6ರಷ್ಟು ಮೀಸಲಾತಿ ಸಾಕು ಎಂದರೆ, ಮಾದಿಗರ ಪರವಾಗಿ ನ್ಯಾಯಾಲಯದಲ್ಲಿ ವಾದ ಮಾಡಲು ವಕೀಲರನ್ನು ನೇಮಿಸಬೇಕು ಎಂದರು.

ಈ ಸಂದರ್ಭದಲ್ಲಿ ಆಂಜನೇಯ, ಹುಸೇನ್ ಭಾಷ,ಕಮಲ್ ಆಂಜನೇಯ ಸೇರಿದಂತೆ ಉಪಸ್ಥಿತರಿದ್ದರು.

ನಿಯಮಿತವಾಗಿ ಚಲಿಸಲಿವೆ ವಿಶೇಷ ರೈಲುಗಳು : ಡಾ.ಬಾಬುರಾವ್

/ 08:15 ನಂತರ ಬೆಳಿಗ್ಗೆ 9.10 ರಿಂದ 9.15 ಕಲಬುರಗಿ , ಮಧ್ಯಾಹ್ನ 12.15 ರ ವೇಳೆಗೆ ಬೀದರ ತಲುಪಲಿದೆ. ಹಾಗೇ ಶನಿವಾರ ಮತ್ತು ಸೋಮವಾರ

ಮಧ್ಯಾಹ್ನ 2 ಗಂಟೆಗೆ ಬೀದರಿನಿಂದ ಹೊರಡುವ ರೈಲು (ಸಂಖ್ಯೆ 16560) ಕಲಬುರಗಿಗೆ ಸಂಜೆ 5 ಗಂಟೆಗೆ, ಧರ್ಮಾವರಂಗೆ ರಾತ್ರಿ 12 ಗಂಟೆ 10 ಇಲ್ಲವೆ 15 ನಿಮಿಷಕ್ಕೆ ಬರಲಿದೆ. ಯಲಹಂಕ, ಧರ್ಮಾವರಂ, ಅನಂತಪುರ, ಗುಂತಗಲ್, ಆದೋನಿ, ಮಂತ್ರಾಲಯಂ ರಸ್ತೆ, ರಾಯಚೂರು, ಕೃಷ್ಣ, ವಾಡಿ, ಶಹಾಬಾದ್, ಹುಮನಾಬಾದ್ ರೈಲುನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ವಾರಕ್ಕೆ ಎರಡು ಬಾರಿ ಬೆಂಗಳೂರುದಿಂದ: ಶುಕ್ರವಾರ ಭಾನುವಾರ ಬೀದರ್ನಿಂದ ಶನಿವಾರ ಸೋಮವಾರ ಈ ರೈಲು ಸಂಚರಿಸಲಿದೆ ಎಂದು ತಿಳಿಸಿದ್ದಾರೆ. ಈ ರೈಲು ಸಂಚಾರಕ್ಕೆ ಎರಡು ದಶಕಗಳಿಂದ ಈ ಭಾಗದ ಜನರ ಬೇಡಿಕೆಯಾಗಿತ್ತು. ಜನರ ಬೇಡಿಕೆಯಲ್ಲಿ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣನವರ ಗಮನಕ್ಕೆ ತಂದು ಜನರ ಪರವಾಗಿ ಮನವಿ ಮಾಡಿಕೊಳ್ಳಲಾಗಿತ್ತು. ನಮ್ಮ ಮನವಿಗೆ ಹಾಗೂ ಜನರ ಆಶೋತ್ತರಕ್ಕೆ ಸ್ಪಂದಿಸಿರುವ ವಿ.ಸೋಮಣ್ಣನವರು ಅಭಿನಂದನಾರ್ಹರು ಎಂದು ಹೇಳಿದರು.

ಭಗತ್ ಸಿಂಗ್, ರಾಜಗುರು, ಸುಖದೇವ್ ಹುತಾತ್ಮರ ದಿನಾಚರಣೆ



ರಾಯಚೂರು,ಮಾ.23-

ದೇಶದ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಕ್ರಾಂತಿಕಾರಿಗಳಾದ ಶಹೀದ್ ಭಗತ್ ಸಿಂಗ್, ಸುಖ ದೇವ್ ಮತ್ತು ರಾಜಗುರು ಅವರ ಹುತಾತ್ಮ ದಿನವನ್ನು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ ನೇತೃತ್ವದಲ್ಲಿ ಆಚರಿಸಲಾಯಿತು. ಮಾವಿನಕೆರೆ (ಆಮ್ ತಲಾಬ್) ಗಾರ್ಡನ್ ಮತ್ತು ಸ್ಟೇಷನ್ ರಸ್ತೆಯ ಸಾರ್ವಜನಿಕ ಉದ್ಯಾನವನದಲ್ಲಿ ಬೆಳಗಿನ ವಾಯು ವಿಹಾರಕ್ಕೆ ಬಂದ ಹಿರಿಯರು, ಯುವ ಜನರ ಸಹಕಾರ ದಲ್ಲಿ ಹುತಾತ್ಮ ದಿನವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಚನ್ನಬಸವ ಜಾನೇಕಲ್, ಕಾರ್ಯದರ್ಶಿ ವಿನೋದ್ ಕುಮಾರ್, ಪ್ರವೀಣ್, ಶಂಕರ್ ಗೌಡ, ಮಹದೇವ್, ಸುರೇಶ್, ವೆಂಕಟೇಶ್, ರಾಮಕೃಷ್ಣ, ನರಸಪ್ಪ, ಶರಣಬಸವ, ನಿಖಿಲ್, ಬೋಳ ಬಂಡಿ ಮಲ್ಲಿಕಾರ್ಜುನ, ಸುರೇಶ, ವಿಜಯ್, ನರಸಿಂಹ ಮುಂತಾದವರು ಇದ್ದರು.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಕ್ತರ ದಂಡು; ರಜೆ ಹಿನ್ನೆಲೆ ಭಾರಿ ಜನಸಂದಣಿ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ) : ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ರವಿವಾರ ಭಕ್ತರ ದಂಡು ಕಾಣಿಸಿಕೊಂಡಿತು. ಬೆಳಗ್ಗಿನಿಂದಲೇ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಶ್ರೀ ದೇವರ ದರ್ಶನ ಪಡೆದು ತೀರ್ಥ ಪ್ರಸಾದ ಹಾಗೂ ಭೋಜನ ಪ್ರಸಾದವನ್ನು ಸ್ವೀಕರಿಸಿದರು.

ಮಾರ್ಚ್ ತಿಂಗಳಲ್ಲಿ ಚಾಂದ್ರಮಾನ ಯುಗಾದಿ ಹಾಗೂ ರಂಜಾನ್ ರಜಾ ದಿನಗಳು ಸಮಕಾಲದಲ್ಲಿ ಬಂದಿರುವುದರಿಂದ ಸರ್ಕಾರಿ ಕಚೇರಿಗಳು, ಶಾಲೆಗಳು ಹಾಗೂ ಕಾಲೇಜುಗಳಿಗೆ ರಜೆ ಇರುವ ಹಿನ್ನೆಲೆ ರಾಜ್ಯದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ಹೊರರಾಜ್ಯಗಳಿಂದಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ ದೃಶ್ಯ ಕಂಡುಬಂತು.

ವಿಶೇಷವಾಗಿ ಕುಟುಂಬ ಸಮೇತವಾಗಿ ಆಗಮಿಸಿದ ಭಕ್ತರು ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಿನವಿಡೀ ಭಕ್ತಿಭಾವದಿಂದ ಕಾಲ ಕಳೆಯುತ್ತಿರುವುದು ಗಮನಾರ್ಹವಾಗಿತ್ತು.

ದೇವಸ್ಥಾನದ ಒಳಪ್ರಾಂಗಣದಲ್ಲಿ ಶಿಸ್ತಿನ ಸಾಲಿನಲ್ಲಿ ಭಕ್ತರು ದರ್ಶನಕ್ಕಾಗಿ ನಿಂತಿದ್ದು, ಭಕ್ತರ ಸೌಲಭ್ಯಕ್ಕಾಗಿ ದೇವಸ್ಥಾನ ಆಡಳಿತ ಮಂಡಳಿ ಸಮರ್ಪಕ ವ್ಯವಸ್ಥೆಗಳನ್ನು ಮಾಡಿರುವುದು ಗಮನಸೆಳೆಯಿತು. ದೇವರ ದರ್ಶನಕ್ಕಾಗಿ ಹೆಚ್ಚುವರಿ ಸಿಬ್ಬಂದಿ ಯನ್ನು ನಿಯೋಜಿಸಲಾಗಿದ್ದು, ತೀರ್ಥ ಪ್ರಸಾದ ವಿತರಣೆಯಲ್ಲಿಯೂ ಯಾವುದೇ ಅಡಚಣೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಭಕ್ತರಿಗೆ ಸರಿಯಾದ ಮಾರ್ಗದರ್ಶನ ನೀಡಲು ಸಿಬ್ಬಂದಿ ವರ್ಗ ನಿರಂತರವಾಗಿ ಕಾರ್ಯನಿರ್ವ ಹಿಸುತ್ತಿದ್ದು, ಸಾರ್ವಜನಿಕರಿಗೆ ಮಾಹಿತಿ ನೀಡುವ ಕಾರ್ಯವೂ ಪರಿಣಾಮಕಾರಿಯಾಗಿ ಜರುಗಿತು.



ಶ್ರೀ ಶ್ರೀ ವರಗುರು ಆದಿಚಿಂತಲಾಮುನಿ ನಲ್ಲಾರೆಡ್ಡಿ ಸ್ವಾಮಿಯವರ ಭಕ್ತರಾದ 'ಶ್ರೀ ಭೀಮವ್ವ ರಂಗಯ್ಯ ತಾತನವರು ಜಾತ್ರಾ ಮಹೋತ್ಸವ ಸಮಾರಂಭ 35ನೇ ಆರಾಧನೆ ಮತ್ತು ಜಾತ್ರೆ ಮಹೋತ್ಸವ ಆಹ್ವಾನ ಪತ್ರಿಕೆ ಸಾಜಂಬಲದಿನ್ನಿತಾ॥ಜಿರಾಯಚೂರು ಶಾಸಕರ ಪರವಾಗಿ ಬಸನಗೌಡ ದದ್ದಲ್ ರವರ ಪರವಾಗಿ ಸಿಂಡಿಕೇಟ್ ಸದಸ್ಯರಾದ ಚನ್ನಬಸವ ನಾಯಕ್ ಮತ್ತು ಊರಿನ ಎಪಿಎಂಸಿ ಸದಸ್ಯರು ಗೋವಿಂದಪ್ಪ ನರಸಿಂಹ ಎಸ್ ಟಿ ಸೆಲ್ ಉಪಾಧ್ಯಕ್ಷರು ರಂಗರಾಜ್ ನಾಯಕ್ ಯರಗೇರಾ ರಂಗಪ್ಪ ಇನ್ನಿತರ ಮುಖಂಡರು ಭಾಗವಹಿಸಿದ್ದರು

ಒಳಮೀಸಲಾತಿ ನೀತಿ ವಿರೋಧಿಸಿ ನಾಳೆ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ

ಬೆಂಗಳೂರು,ಮಾ.23-

ಸರ್ಕಾರದ ಒಳಮೀಸಲಾತಿ ನೀತಿ ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವತಿಯಿಂದ ಮಾರ್ಚ್ 24ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಮಾವೇಶವ ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ತಿಳಿಸಿದರು.



ವಸಂತನಗರದ ಜಸ್ಮಾ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಅವೈಜ್ಞಾನಿಕವಾಗಿದೆ. ಭೋವಿ, ಬಂಜಾರ, ಕೊರಮ, ಕೊರಚ, ಸೂಕ್ಷ್ಮ, ಅತಿಸೂಕ್ಷ್ಮ ಹಾಗೂ ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗುತ್ತಿದೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಏಕಸದಸ್ಯ ಆಯೋಗದ ವರದಿ ಅಪೂರ್ಣವಾಗಿದೆ. ಹಲವಾರು ಸಂಘಟನೆಗಳು ಸಮೀಕ್ಷೆ ಸರಿಯಾದ ರೀತಿಯಲ್ಲಿ ನಡೆದಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರೂ, ಅದನ್ನು ಪರಿಗಣಿಸದೆ ವರದಿ ಸಲ್ಲಿಸಲಾಗಿದೆ ಎಂದು ಆಕ್ಷೇಪಿಸಿದರು.

ಆಯೋಗದ ವರದಿಯಲ್ಲಿ ಭೋವಿ, ಬಂಜಾರ, ಕೊರಮ, ಕೊರಚ ಹಾಗೂ ಇತರ ಸೂಕ್ಷ್ಮ ಪರಿಶಿಷ್ಟ ಜಾತಿಗಳ ಜನಸಂಖ್ಯೆಯನ್ನು ಸರಿಯಾದ ರೀತಿಯಲ್ಲಿ ಲೆಕ್ಕ ಹಾಕಿಲ್ಲ. 2011ರ ಜನಗಣತಿಯಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಇದ್ದ ಭೋವಿ ಸಮುದಾಯವನ್ನು ವರದಿಯಲ್ಲಿ ಅತಿ ಕಡಿಮೆ ಏರಿಕೆ ತೋರಿಸಲಾಗಿದೆ. ಆಯೋಗ ಸಲ್ಲಿಸಿರುವ ವರದಿಯಲ್ಲಿಯೇ ಈ ಸಮುದಾಯಗಳು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ತೀವ್ರ ಹಿಂದುಳಿದಿವೆ ಎಂದು 26 ಕೋಷ್ಟಕಗಳ ಪೈಕಿ 19ರಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೂ, ಸರ್ಕಾರ ಒಳಮೀಸಲಾತಿ ರೂಪಿಸುವಾಗ ಈ ಅಂಶಗಳನ್ನು ಸೂಕ್ತವಾಗಿ ಪರಿಗಣಿಸಿಲ್ಲ ಎಂದರು.


ಸರ್ಕಾರ ರೂಪಿಸಿರುವ ಪ್ರವರ್ಗ , , ವಿಭಾಗೀಕರಣವೂ ಜನಸಂಖ್ಯಾ ಅನುಪಾತಕ್ಕೆ ಅನುಗುಣವಾಗಿಲ್ಲ. ವಿಶೇಷವಾಗಿ ರೋಸ್ಟರ್ ವ್ಯವಸ್ಥೆ ಅವೈಜ್ಞಾನಿಕವಾಗಿದೆ. ಹಿಂದಿನ ಸರ್ಕಾರದಲ್ಲಿ 560 ಹುದ್ದೆಗಳ ನೇಮಕಾತಿಯಲ್ಲಿ ಒಂದು ಪ್ರವರ್ಗಕ್ಕೆ ಬಹುಪಾಲು ಹುದ್ದೆಗಳು ನೀಡಲಾಗಿದ್ದು, ಪ್ರವರ್ಗ ಗೆ ಶೂನ್ಯ ಅವಕಾಶ ದೊರೆತಿದೆ. ಹೊಸ ರೋಸ್ಟರ್‌ನಲ್ಲಿ ಪ್ರವರ್ಗ ಗೆ ಶೂನ್ಯ ಸ್ಥಾನ ನೀಡಿರುವುದರಿಂದ, ಈ ಸಮುದಾಯಗಳಿಗೆ ಅವಕಾಶ ಸಿಗುವಷ್ಟರಲ್ಲಿ ತಲೆಮಾರುಗಳು ಕಳೆದು ಹೋಗುವ ಪರಿಸ್ಥಿತಿ ಉಂಟಾಗುತ್ತದೆ. ಇದು ಸಮುದಾಯಗಳನ್ನು ಉದ್ದೇಶಪೂರ್ವ ಕವಾಗಿ ಹಿಂದುಳಿಸುವ ಪ್ರಯತ್ನ ಎಂದು ಆರೋಪಿಸಿದರು.

ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು 7% ಹೆಚ್ಚಿಸಿರುವುದನ್ನು ಶೆಡ್ಯೂಲ್ 9ರಲ್ಲಿ ಸೇರಿಸುವ ಮೂಲಕ ಸಂರಕ್ಷಿಸಬೇಕು. ಜೊತೆಗೆ - ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸದೇ ನೇರವಾಗಿ ಸಮುದಾಯಗಳ ಅಭಿವೃದ್ಧಿಗೆ ಬಳಸಬೇಕು. ರಾಜ್ಯದಲ್ಲಿರುವ ವಿವಿಧ ಪರಿಶಿಷ್ಟ ಜಾತಿ ನಿಗಮಗಳಿಗೆ ಜನಸಂಖ್ಯಾ ಆಧಾರಿತವಾಗಿ ಮೀಸಲಾದ ಅನುದಾನವನ್ನು ನೇರವಾಗಿ ಬಿಡುಗಡೆ ಮಾಡುವ ಮೂಲಕ ಸಮುದಾಯಗಳ ಅಭಿವೃದ್ಧಿಗೆ ವೇಗ ನೀಡಬೇಕು. ಇದಲ್ಲದೆ, ಪರಿಶಿಷ್ಟ ಜಾತಿಯಲ್ಲಿ ಒಳಪಡುವ 101 ಸಮುದಾಯಗಳ ಪ್ರತಿನಿಧಿಗಳನ್ನು ಒಳಗೊಂಡ ತಜ್ಞರ ಸಮಿತಿ ರಚಿಸಿ, ಎಲ್ಲರ ಅಭಿಪ್ರಾಯಗಳನ್ನು ಪಡೆದು ಸಮಗ್ರ ಹಾಗೂ ನ್ಯಾಯಯುತ ಒಳಮೀಸಲಾತಿ ನೀತಿ ರೂಪಿಸಬೇಕು ಎಂದರು.

ಮಾರ್ಚ್ 27ರಂದು ಒಳಮೀಸಲಾತಿ ಕುರಿತ ವಿಶೇಷ ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ, ಸರ್ಕಾರವು ಈ ಸಭೆಯಲ್ಲಿ ಸಮಗ್ರ ಚರ್ಚೆ ನಡೆಸಿ ನ್ಯಾಯ ಸಮ್ಮತ ನಿರ್ಧಾರ ಕೈಗೊಳ್ಳಬೇಕು. ಸದ್ಯ ಸರ್ಕಾರ ಭರ್ತಿ ಮಾಡಲು ಉದ್ದೇಶಿಸಿರುವ 56 ಸಾವಿರ ಹುದ್ದೆಗಳನ್ನು ಯಾವುದೇ ಒಳಮೀಸಲಾತಿ ಜಾರಿಗೊಳಿಸದೆ ಭರ್ತಿ ಮಾಡಬಾರದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾನ ಅವಕಾಶಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಈ ಪ್ರತಿಭಟನಾ ಸಮಾವೇಶವನ್ನು ಆಯೋಜಿಸಲಾಗಿದೆ. ಒಟ್ಟಾರೆ, ಪರಿಶಿಷ್ಟ ಜಾತಿಯ ಎಲ್ಲಾ 101 ಸಮುದಾಯಗಳಿಗೆ ಸಮಾನ ನ್ಯಾಯ ದೊರಕಬೇಕು, ಮಲತಾಯಿ ಧೋರಣೆಗೆ ಅಂತ್ಯವಾಗಬೇಕು ಎಂಬ ಪ್ರಮುಖ ಬೇಡಿಕೆಗಳೊಂದಿಗೆ ಮಾರ್ಚ್ 24ರಂದು ನಡೆಯಲಿರುವ ಈ ಸಮಾವೇಶ ರಾಜ್ಯ ರಾಜಕೀಯ ಹಾಗೂ ಸಾಮಾಜಿಕ ವಲಯದಲ್ಲಿ ಗಮನ ಸೆಳೆಯಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ಜನ ಸೇರುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದರು.

ಮೀಸಲಾತಿ ಒಕ್ಕೂಟದ ಅಧ್ಯಕ್ಷ ಡಾ.ಹೆಚ್.ರವಿ ಮಾಕಳಿ ಮಾತನಾಡಿ, ಬೋವಿ, ಕೊರಚ, ಕೊರಮ, ಲಂಬಾಣಿ ಸೇರಿದಂತೆ ವಿವಿಧ ಜನಾಂಗಗಳ ಮೇಲೆ ನಡೆಯುತ್ತಿರುವ ಅನ್ಯಾಯದ ವಿರುದ್ಧ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ರಾಜ್ಯದ ವಿವಿಧ ಭಾಗಗಳಿಂದ ಸುಮಾರು 2ರಿಂದ 3 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಧ್ಯಕ್ಷ ರಾಘವೇಂದ್ರ ನಾಯಕ್ ಮಾತನಾಡಿ, ಒಳಮೀಸಲಾತಿ ಅನುಷ್ಠಾನಕ್ಕೆ ಮುನ್ನ ಸಮಗ್ರ, ಪ್ರಾಯೋಗಿಕ ದತ್ತಾಂಶ ಆಧಾರಿತ ಅಧ್ಯಯನದ ಅಗತ್ಯವಿದೆ. ಆದರೆ ರಾಜ್ಯ ಸರ್ಕಾರವು ಈ ಸಂಬಂಧ ಸೂಕ್ತ ಮಾಹಿತಿಯಿಲ್ಲದೆ ತ್ವರಿತ ನಿರ್ಧಾರ ಕೈಗೊಂಡಿದೆ. ಸುಪ್ರೀಂ ಕೋರ್ಟ್ ತೀರ್ಪುಗಳಲ್ಲೂ ಸಮುದಾಯಗಳ ಹಿಂದುಳಿತ್ವವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕೆಂದು ಸೂಚನೆ ನೀಡಲಾಗಿದೆ. ಆದರೂ ರಾಜ್ಯ ಸರ್ಕಾರ ಈ ಅಂಶಗಳನ್ನು ಪರಿಗಣಿಸದೇ , , ವರ್ಗೀಕರಣ ಘೋಷಿಸಿರುವುದು ಅನ್ಯಾಯ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸಿರುಗುಪ್ಪ : ನಗರದ ಶಾಹಿ ಜಾಮಿಯಾ ಮಜೀದ್ ನಲ್ಲಿ ಸಂಭ್ರಮದಿಂದ ಈದ್ ಉಲ್ ಫಿತ್ರ್ ರಂಜಾನ್ ಹಬ್ಬ ಆಚರಿಸಲಾಯಿತು ಇಮಾಮೊ ಖತೀಬ್ ಹಾಫೀಜ್ ಖುರಾನ್ ಹಾಜಿ ಜಿ ಲುಕ್ಮಾನ್ ಅವರು ಸಾಮೂಹಿಕ ಪ್ರಾರ್ಥನೆ ಮಾಡಿಸಿದರು ಹಾಫೀಜ್ ಶರೀಫ್ ಸಾಬ್, ಹಾಫಿಜ್ ರೋಷನ್, ಮಾಜಿ ಅಧ್ಯಕ್ಷರು ಹಾಜಿ ಪಿ.ಅಬ್ದುಲ್ ಸಾಬ್, ಆರ್ಕಟ್ ಎಸ್.ಅಬ್ದುಲ್ ಹಮೀದ್ ಸಾಬ್, ಮುಲ್ಲಾ ದಾದಾ ಖಲಂದರ್,ಘ ಮುಲ್ಲಾ ಕಲೀವ್, ಮುಸ್ಲಿಂ ಬಾಂಧವರಿಗೆ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಹಬ್ಬದ ಶುಭಾಶಯ ಕೋರಿದರು .




ಇಂದು ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘದ. ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷರು. ಹಾಗೂ ಪದಾಧಿಕಾರಿಗಳು. ಇಂದು ವಿಧಾನಪರಿಷತ್. ಶಾಸಕರಾದ ಬಸನಗೌಡ ಬಾದರ್ಲಿ. ಇವರ ಗ್ರಹ ಕಚೇರಿ.ಜನಸ್ಪಂದನದಲ್ಲಿ. ವಿಧಾನ ಪರಿಷತ್ ಶಾಸಕರನ್ನು ಭೇಟಿಯಾಗಿ. ಅವರ ಕುಂದು ಕೊರತೆಗಳ ಸಮಸ್ಯೆಗಳ ಬಗ್ಗೆ ಚರ್ಚಿಸಿ. ಅವರ ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು. ಮನವಿಯನ್ನು ಪಡೆದುಕೊಂಡ ನಂತರ ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಅವರು ಮಾತನಾಡಿ. ತಮ್ಮ ಬೇಡಿಕೆಗಳನ್ನು ಈಡೇರಿಸಲು ಸರಕಾರದ ಮಟ್ಟದಲ್ಲಿ ಪ್ರಮಾಣಿಕ ಪ್ರಯತ್ನ ಮಾಡಲಾಗುವುದು ಎಂದು. ಅಖಿಲ ಕರ್ನಾಟಕ ಸರಕಾರಿ ಪರವಾನಗಿ ಭೂಮಾಪಕರ ಸಂಘದ ಅಧ್ಯಕ್ಷರಿಗೆ ಮತ್ತು ಪದಾಧಿಕಾರಿಗಳಿಗೆ. ಭರವಸೆ ನೀಡಿದರು.

ಮಸ್ಕಿ ಪುರಸಭೆ ಮುಖ್ಯಾಧಿಕಾರಿಗೆ ಹೆಚ್ಚುವರಿ ಹೊಣೆ

ಮಸ್ಕಿ -: ವಾರ್ಡ್‌ಗಳನ್ನು ಹೊಂದಿರುವ ಮಸ್ಕಿ ಪುರಸಭೆ ಮುಖ್ಯಾಧಿಕಾರಿಗೆ ಮಸ್ಕಿ ಜೊತೆಗೆ ತಾಲ್ಲೂಕಿನ ತುರ್ವಿಹಾಳ ಪಟ್ಟಣ ಪಂಚಾಯಿತಿಯ ಹೆಚ್ಚುವರಿ ಜವಾಬ್ದಾರಿ ನೀಡಿರುವುದು ಆಡಳಿತದ ಮೇಲೆ ಪರಿಣಾಮ ಉಂಟು ಮಾಡಿದೆ.

ಮುಖ್ಯಾಧಿಕಾರಿ ವಾರದಲ್ಲಿ ಕೇವಲ ಎರಡುಮೂರು ದಿನ ಮಾತ್ರ



ಮಸ್ಕಿ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಳಿದ ದಿನ ತುರ್ವಿಹಾಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸಮಯಕ್ಕೆ ಸರಿಯಾಗಿ ಅರ್ಜಿಗಳು ವಿಲೇವಾರಿಯಾಗದ ಕಾರಣ ಬಾಕಿ ಉಳಿಯುತ್ತಿವೆ. ಸಣ್ಣಪುಟ್ಟ ಕೆಲಸಗಳಿಗೂ ಜನರು ಪುರಸಭೆಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪುರಸಭೆ ವ್ಯಾಪ್ತಿಯಲ್ಲಿ ನೀರು, ರಸ್ತೆ ಹಾಗೂ ಸ್ವಚ್ಛತೆ ಸೇರಿದಂತೆ ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ತಕ್ಷಣ ಪರಿಹಾರ ದೊರಕುತ್ತಿ ಲ್ಲ. ಇದು ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಮುಖ್ಯಾ ಧಿಕಾರಿ ಪೂರ್ಣಕಾಲಿಕವಾಗಿ ಲಭ್ಯವಿರದ ಕಾರಣ ಅಧಿಕಾರಿಗಳ ನಡುವೆ ಸಮನ್ವಯ ಕೊರತೆ ಉಂಟಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಜನಪ್ರತಿನಿಧಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮಸ್ಕಿ ಪುರಸಭೆಗೆ ಪ್ರತ್ಯೇಕ ಪೂರ್ಣಕಾಲಿಕ ಮುಖ್ಯಾಧಿಕಾರಿಯನ್ನು ನೇಮಿ ಸಬೇಕು ಎಂದು ಆಗ್ರಹಿಸಿದ್ದಾರೆ. ಪಟ್ಟಣದ ವೇಗದ ಅಭಿವೃದ್ಧಿಗಾಗಿ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವುದು ಅವಶ್ಯಕ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ವಿರೂಪಾಕ್ಷಯ್ಯ ಸ್ವಾಮಿ ಸಾಲಿಮಠ ಅಂತರಗಂಗೆ ಮಸ್ಕಿ

ಸೌಹಾರ್ದತೆಯ ಕೇಂದ್ರ ಬಿಂದುವಾದ ಪಟೇಲರ ಮನೆಯ ಇಫ್ತಾರ ಕೂಟ!ರಂಜಾನ್ ಹಬ್ಬದಂದು ಸುರಕುಂಬಾ ಸವಿದ ಸರ್ವಧರ್ಮಿಯರು



ಅಫಜಲಪುರ,ಮಾ.23-

ತಾಲೂಕಿನ ಹೆಸರಾಂತ ವಕೀಲರು ಹಾಗೂ ಸಮಾಜ ಸೇವಕರಾದ ಬಳೂಂಡಗಿ ಗ್ರಾಮದ ಎಮ್.ಎಲ್. ಪಟೇಲರು ಮೂಲತಃ ಮುಸ್ಲಿಂ ಧರ್ಮಿಯರಾದರೂ ಸರ್ವಧರ್ಮಿಯರ ಪ್ರೀತಿ ಪಾತ್ರರಾಗಿದ್ದಾರೆ ಎಂದರೆ ತಪ್ಪಾಗಲಾರದು. ಏಕೆಂದರೆ ಸ್ವ-ಧರ್ಮಿಯರಿಗಿಂತ ಅನ್ಯಧರ್ಮಿಯರೊಂದಿಗೆ ಅನ್ಯೋನ್ಯತೆ ಸಂಬಂಧ ಹೊಂದಿರುವ ಪಟೇಲರು ಎಲ್ಲಾ ಧರ್ಮದ ಹಬ್ಬ ಹರಿದಿನಗಳಲ್ಲಿ ಎಲ್ಲರೊಂದಿಗೆ ಬೆರೆತು ಅವರಲ್ಲೊಬ್ಬರಾಗುತ್ತಾರೆ.ತಮ್ಮ ಸ್ವ-ಗ್ರಾಮ ಬಳೂಂಡಗಿಯಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ತಾಲೂಕಿನ ಎಲ್ಲಾ ಧರ್ಮದ ಮುಖಂಡರಿಗೂ ಹಾಗೂ ಸಂಘ ಸಂಸ್ಥೆಗಳ ಮುಖಂಡಿರಿಗೂ ಸಾರ್ವಜನಿಕವಾಗಿ ಹಬ್ಬದ ಸಿಹಿ ಭೋಜನ ಏರ್ಪಡಿಸಿದರು.

ಎಮ್.ಎಲ್.ಪಟೇಲರ ಮನದಾಳದ ಮಾತಿನನ್ವಯ ರಂಜಾನ್ ಹಬ್ಬ ಕೇವಲ ಮುಸ್ಲಿಮರ ಹಬ್ಬವಾಗಿರದೆ ಮಾನವ ಕುಲದ ಅಪ್ಪುಗೆಯ ಭಾಂದವ್ಯದ ಸಂಕೇತವಾಗಿದೆ.ಒಂದು ತಿಂಗಳು ಪರಿಯಂತ ಉಪವಾಸ (ರೋಜಾ) ಮಾಡಿ ಪ್ರತಿನಿತ್ಯ ದೇವರನ್ನು(ಅಲ್ಲಾಹನನ್ನು) ಪ್ರಾರ್ಥಿಸಿ ಸಕಲ ಜೀವಾತ್ಮರಿಗೂ ಒಳಿತನ್ನು ಬಯಸುವ ಈ ತಿಂಗಳು ಮುಸ್ಲಲ್ಮಾನರಿಗೆ ವಿಶೇಷ ತಿಂಗಳಾಗಿರುತ್ತದೆ.ನಮ್ಮ ಹಿರಿಯರಿಂದ ಇಲ್ಲಿಯವರೆಗೂ ನಮ್ಮ ಮನೆಯಲ್ಲಿ ಎಲ್ಲಾ ಧರ್ಮದ ಸಹೋದರ- ಸಹೋದರಿಯರನ್ನು ನಮ್ಮ ಮನೆಗೆ ಕರೆದು ಸತ್ಕರಿಸುವುದು ಮುಂದುವರೆಯುತ್ತ ಬಂದಿದೆ.ನಮ್ಮ ಅಲ್ಪ ಕರೆಗೆ ಓಗೊಟ್ಟು ತಾಲೂಕಿನ ಪ್ರತಿಯೊಬ್ಬರೂ ಎಲ್ಲಾ ಸಹೋದರ ಬಾಂದವರು ಬಂದು ರಂಜಾನ್ ಹಬ್ಬದ ವಿಶೇಷ ಸುರಕುಂಬ ಸವಿಯುತ್ತಾರೆ.ಎಲ್ಲಾ ಧರ್ಮದ ಮುಖಂಡರ ಆಗಮನದಿಂದ ಈ ಹಬ್ಬಕ್ಕೆ ನಮ್ಮ ಮನೆಯಲ್ಲಿ ವಿಶೇಷ ಸಂತಸ ಏರ್ಪಡುತ್ತದೆ ಎಂದರು.

ಬಸವರಾಜ ಪಾಟೀಲ್ ಅನ್ವರಿ ಸಾಧನೆಗೆ ಧ್ವನಿಸುರುಳಿ ಬಿಡುಗಡೆ



ಲಿಂಗಸುಗೂರು : ಕೇಂದ್ರದ ಮಾಜಿ ಸಚಿವರಾದ ಬಸವರಾಜ ಪಾಟೀಲ್ ಅನ್ವರಿ ಅವರ ಹುಟ್ಟುಹಬ್ಬದ ಪ್ರಯುಕ್ತ ಏಪ್ರಿಲ್ 18 ರಂದು ನಡೆಯಲಿರುವ ಭವ್ಯ ಅಭಿನಂದನಾ ಕಾರ್ಯಕ್ರಮದ ಅಂಗವಾಗಿ, ಅವರ ಜೀವನ ಸಾಧನೆಗಳನ್ನು ಗೀತೆಗಳ ರೂಪದಲ್ಲಿ ಮೂಡಿಸಿರುವ ಧ್ವನಿಸುರುಳಿಯನ್ನು ದೇವರಭೂಪುರ ಬೃಹನ್ಮಠದ ಅಮರೇಶ್ವರ ಗುರು ಗಜದಂಡ ಶಿವಾಚಾರ್ಯರು ಬಿಡುಗಡೆಗೊಳಿಸಿದರು.

ಪಟ್ಟಣದ ಬೆಂಗಳೂರು ಬೈಪಾಸ್ ರಸ್ತೆಯ ಕೇಂಬ್ರಿಡ್ಜ್ ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಧ್ವನಿಸುರುಳಿ ಬಿಡುಗಡೆ ಜೊತೆಗೆ ಪತ್ರಕರ್ತ ದಿ.ಬಿ.ಎ. ನಂದಿಕೋಲಮಠ ಅವರ ಸುಪುತ್ರಿಯ ಸೀಮಂತ ಕಾರ್ಯಕ್ರಮಕ್ಕೂ ಚಾಲನೆ ನೀಡಿ ಶ್ರೀಗಳು ಮಾತನಾಡಿದರು. ಬಸವರಾಜ ಪಾಟೀಲ್ ಅನ್ವರಿ ಅವರು ತಮ್ಮ ಜೀವನ ಪಥದಲ್ಲಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆ ಅಪಾರವಾಗಿದ್ದು, ಅವರ ಪರಿಶ್ರಮ ಮತ್ತು ಸಾಧನೆಗಳು ಜನತೆಗೆ ಮಾದರಿಯಾಗಿವೆ ಎಂದರು.

ಅವರ ಜೀವನ ಸಾಧನೆಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ, ಏಪ್ರಿಲ್ 18 ರಂದು ನಡೆಯಲಿರುವ ಅಭಿನಂದನಾ ಸಮಾರಂಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವ ಕಾರ್ಯ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಅಭಿಮಾನಿ ಬಳಗ ಕೈಗೊಂಡಿರುವ ಪೂರ್ವ ಸಿದ್ಧತೆಗಳು ಯಶಸ್ವಿಯಾಗಲಿ ಎಂದು ಆಶಿಸಿದರು.

ಜೊತೆಗೆ ಪತ್ರಕರ್ತ ನಂದಿಕೋಲಮಠ ಅವರ ಪುತ್ರಿಯ ಸೀಮಂತ ಕಾರ್ಯಕ್ರಮವೂ ಯಶಸ್ವಿಯಾಗಿ ನೆರವೇರಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಸಂತೆಕೆಲ್ಲೂರು ಘನಮಠದ ಗುರುಬಸವ ಮಹಾಸ್ವಾಮೀಜಿ, ಹುನಕುಂಟಿ ಶರಣಯ್ಯ ತಾತ, ಮಾತಾ ಮಾಣಿಕೇಶ್ವರಿ ಮಠದ ಮಾತಾ ನಂದಿಕೇಶ್ವರಿ ಅಮ್ಮನವರು, ಹೆಚ್, ಬಿ ಮುರಾರಿ,

ಕೇಂಬ್ರಿಡ್ಜ್ ಶಾಲೆಯ ಮುಖ್ಯಸ್ಥ ಮಹಾಂತೇಶ ಗೌಡ,ರ್ ಶಿವಕುಮಾರ ನಂದಿಕೋಲಮಠ ಸೇರಿ ಅನೇಕ ಇದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ನಿಮ್ಮೂರು ಸುದ್ದಿ

ಸಂಪಾದಕೀಯ

ಯುದ್ಧದ ಬಿಸಿ: ಸೆರಾಮಿಕ್ ಟೈಲ್ಸ್ ಉದ್ಯಮ ಸ್ಥಗಿತ, 4 ಲಕ್ಷ ಕಾರ್ಮಿಕರ ಬದುಕಿಗೆ ಭಾರೀ ಹೊಡೆತ



ಯುದ್ಧ ಮುಂದುವರೆದರೆ ಮತ್ತು ಅನಿಲ ಹರಿವು ನಿರ್ಬಂಧಿತವಾದರೆ ಗುಜರಾತ್‌ನ ಅತ್ಯಂತ ಪ್ರಮುಖ ಕೈಗಾರಿಕಾ ಸಮೂಹಗಳು ಇತಿಹಾಸದಲ್ಲಿಯೇ ಕಾಣದಂತಹ ಅತ್ಯಂತ ಕಠಿಣ ಪರಿಸ್ಥಿತಿಗಳನ್ನು ಎದುರಿಸಬಹುದು.

ಗುಜರಾತ್‌ನ ಮೋರ್ಬಿ ನಗರವು ಭಾರತದ ಅತಿದೊಡ್ಡ ಸೆರಾಮಿಕ್ ಟೈಲ್ಸ್ ಕ್ಲಸ್ಟರ್‌ಗೆ ಪ್ರಸಿದ್ಧಿಯಾಗಿದೆ. ಇಲ್ಲಿ ವಿಶ್ವದ ಎರಡನೇ ಅತಿದೊಡ್ಡ ಟೈಲ್ಸ್ ಉತ್ಪಾದನಾ ಕೇಂದ್ರವಿದೆ. ವಾರ್ಷಿಕ 60,000ದಿಂದ 75,000 ಕೋಟಿ ರೂಪಾಯಿ ವ್ಯವಹಾರವಿದ್ದು, 600ರಿಂದ 700 ಫ್ಯಾಕ್ಟರಿಗಳಿವೆ. ಇಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಾಲ್ಕು ಲಕ್ಷಕ್ಕೂ ಅಧಿಕ ಮಂದಿ ಕಾರ್ಮಿಕರು ತಮ್ಮ ಬದುಕು ಕಟ್ಟಿಕೊಂಡಿದ್ದರು. ಆದರೆ ಅಮೆರಿಕ ಇಸ್ರೇಲ್ ನಡೆಸಿದ ಇರಾನ್ ಮೇಲಿನ ದಾಳಿಯಿಂದಾಗಿ ಸ್ಟ್ರೈಟ್ ಆಫ್ ಹಾರ್ಮುಜ್ ಮೂಲಕ ಬರುವ ಪ್ರೊಪೇನ್ ಮತ್ತು ನೈಸರ್ಗಿಕ ಅನಿಲ ಸರಬರಾಜು ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಇದರ ಪರಿಣಾಮವಾಗಿ ಮಾರ್ಚ್ ಮಧ್ಯದಿಂದಲೇ ನೂರಾರು ಕಾರ್ಖಾನೆಗಳು ಮುಚ್ಚಿದ್ದು, 450ಕ್ಕೂ ಅಧಿಕ ಯುನಿಟ್‌ಗಳು ಏಪ್ರಿಲ್ 15ರವರೆಗೆ ಸಾಮೂಹಿಕ ಬಂದ್ ಘೋಷಿಸಿವೆ. ಈಗಾಗಲೇ ಒಂದು ತಿಂಗಳಿನಿಂದ ಹಲವು ಫ್ಯಾಕ್ಟರಿಗಳು ಕಾರ್ಯಾಚರಣೆ ನಿಲ್ಲಿಸಿವೆ.

ಮೋರ್ಬಿ ಭಾರತದ ಸುಮಾರು ಶೇ.80ರಷ್ಟು ಸೆರಾಮಿಕ್ ಅನ್ನು ಉತ್ಪಾದಿಸುತ್ತದೆ. ಮುಖ್ಯವಾಗಿ ಟೈಲ್ಸ್ ಮತ್ತು ಸ್ಯಾನಿಟರಿವೇರ್ ಸೆರಾಮಿಕ್ಸ ನ್ನು ಮಧ್ಯಪ್ರಾಚ್ಯ, ಆಫ್ರಿಕಾ ಮತ್ತು ಯುರೋಪ್‌ಗೆ ರಫ್ತು ಮಾಡಲಾಗುತ್ತದೆ. ಆದರೆ ಈಗ ಸೆರಾಮಿಕ್ ಉತ್ಪಾದನೆಗೆ ಪ್ರಮುಖ ಇಂಧನಗಳಾದ ಪ್ರೋಪೇನ್ ಮತ್ತು ನೈಸರ್ಗಿಕ ಅನಿಲದ ಪೂರೈಕೆ ಕಡಿತಗೊಂಡ ನಂತರ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿರುವುದಾಗಿ ತಯಾರಕರು ತಿಳಿಸಿದ್ದಾರೆ.

ಈ ಉದ್ಯಮದಲ್ಲಿ ಬಹುತೇಕ ಕಾರ್ಮಿಕರು ಬಿಹಾರ, ಉತ್ತರ ಪ್ರದೇಶ, ಝಾರ್ಖಂಡ್‌ನಿಂದ ವಲಸೆ ಬಂದವರು. ದೈನಂದಿನ ಕೂಲಿ ಅಥವಾ ಮಾಸಿಕ ಸಂಬಳದ ಮೇಲೆ ಅವರ ಕುಟುಂಬಗಳು ನಿಂತಿವೆ. ಈಗ ಆ ಸಂಬಳಗಳು ಕಡಿತಗೊಳ್ಳುತ್ತಿರುವುದೂ ಅಲ್ಲದೆ ವಿಳಂಬವೂ ಆಗಿತ್ತಿದೆ. ಕೆಲವೆಡೆ ಸಂಪೂರ್ಣವಾಗಿ ವೇತನ ನೀಡುವುದೇ ನಿಂತುಹೋಗಿದೆ. ಸಾವಿರಾರು ಮಂದಿ ಕಾರ್ಮಿಕರು ತಮ್ಮ ಮನೆಗಳಿಗೆ ವಾಪಸ್ಸಾ ಗುತ್ತಿದ್ದಾರೆ. ಇದರಿಂದಾಗಿ ರೈಲು ನಿಲ್ದಾಣಗಳಲ್ಲಿ ಜನಸಂದಣಿ ಹೆಚ್ಚಾಗಿದೆ. ಉಳಿದವರು ಆಹಾರ, ವಸತಿ ಇಲ್ಲದೆ ಹಸಿವು ಮತ್ತು ಅನಿಶ್ಚಿತತೆಯ ನಡುವೆ ದಿನ ಕಳೆಯುತ್ತಿದ್ದಾರೆ.

ಈ ಕಾರ್ಮಿಕರಿಗೆ ಸಾಮಾನ್ಯವಾಗಿ 16,000 ರೂಪಾಯಿ ಸಂಬಳ. ಮಾರ್ಚ್ 15ರಿಂದಲೇ ಕೆಲಸ ಇಲ್ಲದಂತಾಗಿದೆ. ಇಷ್ಟೇ ಚಪಾತಿ ಇರುವುದು ನನ್ನ ಬಳಿ. ಸಂಬಳ ಸಿಗದಿದ್ದರೆ ಏನನ್ನೂ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಮನೆಗೆ ವಾಪಸಾಗುವುದೊಂದೇ ದಾರಿ ಎಂದು ಕಾರ್ಖಾನೆ ಆವರಣದಲ್ಲಿ ಕುಳಿತ ರಾಧೆ ಎಂಬುವವರು ತನ್ನ ಮೂರು ಮತ್ತು ಐದು ವರ್ಷದ ಮಕ್ಕಳಿಗೆ ಎರಡು ಚಪಾತಿಗಳನ್ನು ಹಂಚುತ್ತ ಸಂಕಟ ತೋಡಿಕೊಂಡಿದ್ದಾರೆ.

ಬಿಹಾರದ ಕಟಿಹಾರ್ ಜಿಲ್ಲೆಯ ಶಂಭು ಕುಮಾರ್ ಕುಟುಂಬದಲ್ಲಿ ಆರು ಮಂದಿ ಇದ್ದು, ಇವರೊಬ್ಬರ ದುಡಿಮೆಯಿಂದಲೇ ಬದುಕು ನಡೆಯುತ್ತಿತ್ತು. ಇವರು ಫ್ಯಾಕ್ಟರಿ ಕ್ವಾರ್ಟರ್‌ನಲ್ಲಿ ವಾಸವಾಗಿದ್ದರು. ಮಾಲೀಕರು ಕೆಲವು ತಿಂಗಳು ಉಳಿಸಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಆದರೆ, ಮನೆಯಲ್ಲಿರುವವರ ಗತಿ ಏನು? ಇಲ್ಲಿ ಬಿಟ್ಟು ಹೋದರೆ ಮತ್ತೆ ನನ್ನ ಸ್ಥಿತಿ ಶೂನ್ಯ ಎಂದು ಅಲವತ್ತುಕೊಂಡಿದ್ದಾರೆ.

ಪರಿಸ್ಥಿತಿ ಸುಧಾರಿಸದಿದ್ದರೆ ಮುಂದಿನ ತಿಂಗಳು ಕಾರ್ಮಿಕರಿಗೆ ಕೇವಲ ಶೇ.50ರಷ್ಟು ಸಂಬಳ ದೊರೆಯುತ್ತದೆ. ಇದರಿಂದ ಮನೆ ಖರ್ಚು, ಔಷಧಿ, ಮಕ್ಕಳ ಶಾಲೆ ಕಾಲೇಜಿನ ಫೀಸ್, ಬಾಡಿಗೆ ಖರ್ಚುಗಳನ್ನು ನಿಭಾಯಿಸುವುದು ಕಷ್ಟವಾಗುತ್ತದೆ. ಅಲ್ಲದೆ ಕೆಲಸ ಇಲ್ಲದೆ ಕಾರ್ಖಾನೆಯಲ್ಲಿಯೇ ಉಳಿದರೆ ಹಸಿವಿನಿಂದ ಸಾಯಬೇಕಾದ ಪರಿಸ್ಥಿತಿ ಎದುರಾಗಿದೆ.

ಕೆಲವು ಕಾರ್ಖಾನೆಗಳ ಮಾಲೀಕರು ಆಹಾರ-ವಸತಿ ಒದಗಿಸುತ್ತಿದ್ದರೂ, ಯುದ್ಧ ಮುಂದುವರೆದರೆ ಇದೂ ಕೂಡ ಸ್ಥಗಿತಗೊಳ್ಳುವ ಸಾಧ್ಯತೆಯಿದೆ. ಸಂಬಂಧಿತ ಕ್ಷೇತ್ರಗಳಾದ ಲಾಜಿಸ್ಟಿಕ್ಸ್(ಸರಕು ಸಾರಿಗೆ), ಪ್ಯಾಕಿಂಗ್, ರೀಟೈಲ್‌ನಲ್ಲೂ ಸಂಬಳ ಕಡಿತ ಆರಂಭವಾಗಿದೆ. ಟೈಲ್ಸ್ ಬೆಲೆ ಏರಿಕೆಯಿಂದ ಕಟ್ಟಡ ಉದ್ಯಮಕ್ಕೂ ಆಘಾತ.

ಈಗಾಗಲೇ ಲಕ್ಷಾಂತರ ಕಾರ್ಮಿಕರು ಮನೆಗೆ ವಾಪಸ್ಸಾ ಗುತ್ತಿರುವುದರಿಂದ ಲಕ್ಷ್ಮೀಧೀರ್‌ಪುರ್, ಸಲಾನಾ, ಲಾಲ್‌ಪಾರ್, ಜಂಬುಡಿಯಾ ಪ್ರದೇಶಗಳಲ್ಲಿ ವಲಸೆ ಕಾರ್ಮಿಕರ ವಸತಿಗಳು ಖಾಲಿಯಾಗುತ್ತಿವೆ.

ಸರ್ಕಾರದಿಂದ ತ್ವರಿತ ಹಸ್ತಕ್ಷೇಪ, ಪರ್ಯಾಯ ಇಂಧನ ಮೂಲಗಳು, ಉದ್ಯೋಗ ಭದ್ರತಾ ಯೋಜನೆಗಳ ಅಗತ್ಯವಿದೆ. ಈ ಯುದ್ಧದ ಬಿಸಿ ಮೋರ್ಬಿಯ ಫ್ಯಾಕ್ಟರಿಗಳಿಂದ ಬಿಹಾರ-ಉಪ್ರದೇಶದ ಗ್ರಾಮಗಳವರೆಗೆ ತಲುಪಿದೆ. ಒಂದು ತಿಂಗಳ ಬಂದ್ ಲಕ್ಷಾಂತರ ಕುಟುಂಬಗಳ ಭವಿಷ್ಯವನ್ನು ಅನಿಶ್ಚಿತತೆಯಲ್ಲಿ ಮುಳುಗಿಸಿದೆ. ಯುದ್ಧ ನಿಲ್ಲದಿದ್ದರೆ ಹಸಿವು ಮತ್ತು ಬಡತನದ ಸರಣಿ ಪ್ರಾರಂಭವಾಗುತ್ತದೆ.

ಇಂಧನ ಕೊರತೆಯು ತೀವ್ರವಾಗಿ ಹದಗೆಟ್ಟಿರುವ ಕಾರಣ ಹೆಂಚು(ಟೈಲ್ಸ್)ಗಳನ್ನು ನಿರಂತರವಾಗಿ ಸುಡಲಾಗದೆ ಕಾರ್ಖಾನೆಗಳು ಕಾರ್ಯಾಚರಣೆಗಳನ್ನು ನಿಲ್ಲಿಸಿವೆ. ಪ್ರೋಪೇನ್ ಅನ್ನು ಅವಲಂಬಿಸಿರುವ ಕಾರ್ಖಾನೆಗಳು ಸಂಪೂರ್ಣವಾಗಿ ಮುಚ್ಚಿವೆ. ನೈಸರ್ಗಿಕ ಅನಿಲ ಇನ್ನೂ ಲಭ್ಯವಿದೆ, ಆದರೆ ಬೆಲೆಗಳು ಅಸ್ಥಿರ ಮತ್ತು ಅನಿರೀಕ್ಷಿತವಾಗಿರುವುದರಿಂದ ಅದನ್ನು ಬಳಸುತ್ತಿರುವ ಹೆಚ್ಚಿನ ಘಟಕಗಳೂ ಕೂಡ ನಿಂತುಹೋಗಿವೆ. ಇದರಿಂದಾಗಿ ತಯಾರಕರು ತಮ್ಮ ಉತ್ಪನ್ನಗಳಿಗೆ ಹೇಗೆ ಬೆಲೆ ನಿಗದಿಪಡಿಸಬೇಕೆಂದು ತಿಳಿಯದೆ ಅತಂತ್ರರಾಗಿದ್ದಾರೆ.

ಮೋರ್ಬಿಯ 3,000ಕ್ಕೂ ಹೆಚ್ಚು ಸೆರಾಮಿಕ್ ಮಾರಾಟಗಾರರು ಮತ್ತು ವಿತರಕರು ಈಗಾಗಲೇ ಸ್ಟಾಕ್ ಇರುವ ಟೈಲ್ಸ್ ಗಳ ಮೇಲೆ ಅವಲಂಬಿತರಾಗಿದ್ದಾರೆ. ಒಂದು ವಾರದವರೆಗೆ ಹೊಸ ಸರಬರಾಜುಗಳನ್ನು ಕಡಿತಗೊಳಿಸಲಾಗಿದೆ. ಈ ಸ್ಥಗಿತವು ಹೀಗೆಯೇ ಮುಂದುವರಿದರೆ, ದೇಶೀಯ ಕೊರತೆ ಉಂಟಾಗಬಹುದು. ಇದರಿಂದಾಗಿ ಏಪ್ರಿಲ್‌ನಿಂದ ದಾಸ್ತಾನುಗಳು ಕುಗ್ಗಲು ಪ್ರಾರಂಭವಾಗುವ ಸಾಧ್ಯತೆಯಿದೆ.

ಸೆರಾಮಿಕ್ಸ್ ನ್ನು ರಫ್ತು ಮಾಡಲು ವಿಳಂಬವಾಗಬಹುದು. ಅಲ್ಲದೆ ಉತ್ಪಾದನೆಯು ತ್ವರಿತವಾಗಿ ಪುನರಾರಂಭಗೊಳ್ಳದಿದ್ದರೆ ಬೆಲೆಗಳು ಏರಿಕೆಯಾಗಬಹುದು. ಯಾವುದೇ ಹೆಚ್ಚಳದ ಪ್ರಮಾಣವು ಎಷ್ಟು ಸಮಯದವರೆಗೆ ಇಂಧನ ಕೊರತೆ ಉಂಟುಮಾಡುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಸದ್ಯಕ್ಕೆ ತಯಾರಾಗಿರುವ ಸೆರಾಮಿಕ್ಸ್ ಗಳಿಂದ ತಕ್ಷಣದ ಪರಿಣಾಮವನ್ನು ಕಡಿಮೆ ಮಾಡಬಹುದು. ಆದರೆ ಹೀಗೆ ಸ್ಥಗಿತ ಮುಂದುವರೆದರೆ ಕೊರತೆಗಳು ಹೆಚ್ಚಾಗುತ್ತವೆ. ಕಾರ್ಖಾನೆಗಳು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿರುವುದರಿಂದ ಮೋರ್ಬಿಯನ್ನು ಮೀರಿ ಆರ್ಥಿಕ ಪರಿಣಾಮ ವಿಸ್ತರಿಸಿದೆ. ವರ್ಷಗಳಲ್ಲಿ ಪಟ್ಟಣದ ಬೆಳವಣಿಗೆಯು ಸೆರಾಮಿಕ್ ಕ್ಷೇತ್ರದ ಯಶಸ್ಸಿ ನೊಂದಿಗೆ ನಿಕಟ ಸಂಬಂಧ ಹೊಂದಿದೆ. ದೀರ್ಘಕಾಲದ ಸ್ಥಗಿತದಿಂದ ಸ್ಥಳೀಯ ವ್ಯವಹಾರಗಳು, ದಿನಗೂಲಿ ಕಾರ್ಮಿಕರು ಮತ್ತು ಪೂರೈಕೆ ಸರಪಳಿ ಪಾಲುದಾರರ ಮೇಲೆ ದುಷ್ಪರಿಣಾಮ ಬೀರಬಹುದು.

ಅಹಿಂದ ರಾಜಕೀಯ : ಸಿಎಂ ಸಿದ್ದರಾಮಯ್ಯ ವಿರುದ್ಧ ಅಶೋಕ್ ವಾಗ್ದಾಳಿ

ಬೆಂಗಳೂರು,ಮಾ.23-

ದಲಿತರು, ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ನಿಮ ಕೊಡುಗೆ ಯಾದರೂ ಏನು ಸ್ವಾಮಿ? ಇವರ ಹೆಸರಿನಲ್ಲಿ ಅಹಿಂದ ರಾಜಕೀಯ ಮಾಡಿ, ವೋಟು ಗಿಟ್ಟಿಸಿಕೊಂಡು ಅಧಿಕಾರದ ಮೋಜು ಮಾಡಿದ್ದು ಬಿಟ್ಟರೆ ತಮ್ಮ ಸಾಧನೆಯಾದರೂ ಏನು? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನೆ ಮಾಡಿದ್ದಾರೆ.

ಈ ಕುರಿತು ನಲ್ಲಿ ಪೋಸ್ಟ್ ಮಾಡಿರುವ ಅವರು, ಪರಿಶಿಷ್ಟರಿಗೆಲ್ಲಿದೆ ಎಸ್‌ಎಸಿಎಸ್‌ಪಿ ಟಿಎಸ್‌ಪಿ ಅನುದಾನ ಗ್ಯಾರಂಟಿ 4 ವರ್ಷಗಳಲ್ಲಿ 53,000 ಕೋಟಿ ದಲಿತರ ಹಣ ವಂಚಿಸಿದ ಕಾಂಗ್ರೆಸ್ ಸರ್ಕಾರ! 2023-24ನೇ ಸಾಲಿನಲ್ಲಿ 11,114 ಕೋಟಿ, 2024-25ನೇ ಸಾಲಿನಲ್ಲಿ 14,282.38 ಕೋಟಿ, 2025-26ನೇ ಸಾಲಿನಲ್ಲಿ 13,433 ಕೋಟಿ, 2026-27ನೇ ಸಾಲಿನಲ್ಲಿ 14,198.93 ಕೋಟಿ ಎಂದು ಅಂಕಿ ಸಂಖ್ಯೆಗಳ ವಿವರ ನೀಡಿದ್ದಾರೆ.

ಸಿಎಂ ಸಿದ್ದರಾಮಯ್ಯನವರೇ ದೇವರಾಜ ಅರಸು ಅವರ ಮುಖ್ಯಮಂತ್ರಿ ಅಧಿಕಾರಾವಧಿಯ ರೆಕಾರ್ಡ್ ಮುರಿದಿದ್ದೀರಿ. ಆದರೆ ನಿಮ ರಾಜಕೀಯ ಜೀವನದ ಅತ್ಯಂತ ದೊಡ್ಡ ದಾಖಲೆ ಅಂದರೆ ಪರಿಶಿಷ್ಟರ ಹಣವನ್ನು ಅವರ ಕಲ್ಯಾಣಕ್ಕೆ ವಿನಿಯೋಗಿಸದೆ ವಂಚಿಸಿದ್ದು ಎಂದು ವ್ಯಂಗ್ಯವಾಡಿದ್ದಾರೆ.

ಎಷ್ಟು ವರ್ಷ ಕುರ್ಚಿಯಲ್ಲಿ ಕೂತಿದ್ದೀರಿ ಎನ್ನುವ ರೆಕಾರ್ಡ್‌ಗಿಂತ, ಕುರ್ಚಿಯಲ್ಲಿದ್ದಾಗ ಹಿಂದುಳಿದ ವರ್ಗಗಳಿಗೆ ಏನು ಮಾಡಿದ್ದೀರಿ ಎನ್ನುವ ಟ್ರ್ಯಾಕ್ ರೆಕಾರ್ಡ್ ಮುಖ್ಯ. ಪರಿಶಿಷ್ಟರ ಕಲ್ಯಾಣಕ್ಕೆ ವಿನಿಯೋಗವಾ ಗಬೇಕಾದ ಹಣವನ್ನು ಕಬಳಿಸಿ ಅನ್ಯಾಯ ಮಾಡುತ್ತಿದೆ ಈ ದಲಿತ ವಿರೋಧಿ ಕಾಂಗ್ರೆಸ್ ಸರ್ಕಾರ ಎಂದು ವಾಗ್ದಾಳಿ ನಡೆಸಿದ್ದಾರೆ.

ಮತ್ತೊಂದು ಪೋಸ್ಟ್ ನಲ್ಲಿ ಈ ನಾಲಾಯಕ್ ಕಾಂಗ್ರೆಸ್ ಸರ್ಕಾರದ ದುರಾಡಳಿತದಲ್ಲಿ ಶಾಲಾ ಮಕ್ಕಳು ನೀರಿಗಾಗಿ ತವು ಬೋರ್‌ವೆಲ್ ತಾವೇ ಕೊರೆದುಕೊಳ್ಳಬೇಕು. ನಾಗರಿಕರು ರಸ್ತೆಗುಂಡಿಗಳನ್ನು ತಾವೇ ಮುಚ್ಚಿಕೊಳ್ಳಬೇಕು. ಈ ದರಿದ್ರ ಕಾಂಗ್ರೆಸ್ ಸರ್ಕಾರ ಬದುಕಿದ್ದರೂ, ಕನ್ನಡಿಗರ ಪಾಲಿಗೆ ಸತ್ತಂತೆ ಎಂದು ಅಶೋಕ್ ಆಕ್ರೋಶ ಹೊರಹಾಕಿದ್ದಾರೆ.

ಎಸೆಸ್ಸೆಲ್ಸಿ ಮಕ್ಕಳಿಗೆ ಟ್ಯೂಷನ್ ಕ್ಲಾಸ್ ತರಬೇತಿ



ಸಿರವಾರ.ಮಾ23-

ತಾಲೂಕಿನ ಹೀರಾ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಎಸ್ ಎಸ್ ಎಲ್ ಸಿ ಮಕ್ಕಳಿಗೆ ಟ್ಯೂಷನ್ ಕ್ಲಾಸ್ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪ್ರಸ್ತುತ ದಿನದಂದು ಮೂರು ತಿಂಗಳ ಕಾಲ ಯಶಸ್ವಿಯಾಗಿ ಟ್ಯೂಷನ್ ಕ್ಲಾಸ್ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ್ದು ಸಮಾರೋಪ ಕಾರ್ಯಕ್ರಮದಲ್ಲಿ ಯೋಜನಾಧಿಕಾರಿ ಚಂದ್ರಹಾಸನ್ ದೀಪ ಬೆಳಗಿಸುವುದರ ಮೂಲಕ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಹಾಗೂ ಪೂಜ್ಯ ಹೆಗ್ಗಡೆಯವರು ಹಾಗೂ ಮಾತು ಶ್ರೀಮತಿ ಅಮ್ಮನವರ ಮಕ್ಕಳ ಶಿಕ್ಷಣ ಪರ ಕಾಳಜಿಯ ಬಗ್ಗೆ ಮಾಹಿತಿ ನೀಡಿದರು.

ಮುಖ್ಯ ಗುರುಗಳು ಖಾವಂದರ ಸಮಾಜ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಮಕ್ಕಳು ಒಳ್ಳೆಯ ಶಿಕ್ಷಣ ಪಡೆದು ಉನ್ನತ ಸ್ಥಾನದಲ್ಲಿ ಬೆಳೆಯುವ ಬಗ್ಗೆ ಇರುವ ಜನಪರ ಕಾಳಜಿಯನ್ನು ಗೌರವ ವ್ಯಕ್ತಪಡಿಸುತ್ತೇನೆ ಎಂದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ನಮ್ಮ ಶಾಲೆಗೆ ಕೊಟ್ಟಿರುವುದು ನಮಗೆ ತುಂಬಾ ಸಂತಸ ಬಂದಿದೆ ಎಂದರು ತರಬೇತಿ ಟ್ಯೂಷನ್ ತರಬೇತಿ ನಡೆಸಿಕೊಟ್ಟಂತ ವಿಜಯಕುಮಾರ್ ಮಾತನಾಡಿ ಈ ಅವಕಾಶ ನನಗೆ ಸಿಕ್ಕಿದ್ದು ನನ್ನ ಪುಣ್ಯ ಮಕ್ಕಳಿಗೆ ಮೂಲತಃ ಶಿಕ್ಷಣ ಪಡೆಯಲು ಈ ರೀತಿ ಕಾರ್ಯಕ್ರಮಗಳನ್ನು ಪೂಜ್ಯರು ಹಮ್ಮಿಕೊಂಡಿದ್ದು ಪೂಜ್ಯರ ಮಕ್ಕಳ ಕಾಳಜಿಯನ್ನು ನಾನು ತುಂಬಾ ಗೌರಿಸುತ್ತೇನೆ ಎಂದರು ಕಾರ್ಯಕ್ರಮದಲ್ಲಿ ಜ್ಞಾನವಿಕಾಸ ಸಮನ್ವಯ ಅಧಿಕಾರಿ ಯಶೋಧ ವಲಯದ ಮೇಲ್ವಿಚಾರಕರು ಹನುಮಜ್ಜ ಸೇವಾ ಪ್ರತಿನಿಧಿ ವೆಂಕೋಬ ಹಾಗೂ ವಿದ್ಯಾರ್ಥಿಗಳು ಉಪಸಿತರಿದ್ದರು.

ಸ.ನೌ.ಸಂಘದಿಂದ ಮಹಿಳಾ ದಿನಾಚರಣೆ

ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಸಾಧನೆ- ಆರೀಫ್ ಮಿಯಾ



ಸಿರವಾರ.ಮಾ23-

ಮಹಿಳೆಯರು ಕುಟುಂಬ ವ್ಯವಸ್ಥೆಯಲ್ಲಷ್ಟೇ ಅಲ್ಲದೆ ಶಿಕ್ಷಣ, ಕೃಷಿ, ಆಡಳಿತ, ಉದ್ಯಮ, ವಿಜ್ಞಾನ ಮತ್ತು ಸಾಮಾಜಿಕ ಸೇವೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ತಾಲೂಕ ಅದ್ಯಕ್ಷ ಆರೀಫ್ ಮಿಯಾ ಹೇಳಿದರು. ಪಟ್ಟಣದ ಪಿಡಬ್ಲ್ಯೂಡಿ ಕ್ಯಾಂಪಿನಲ್ಲಿರುವ ಪ್ರೌಢಶಾಲೆಯ ಆವರಣದಲ್ಲಿ ಸರ್ಕಾರಿ ನೌಕರ ಸಂಘದಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ತಾಲೂಕ ಸೇವಾರತ್ನ ಪ್ರಶಸ್ತಿ ಪ್ರಧಾನ ಸಮಾರಂಭದ ಅದ್ಯಕ್ಷತೆ ವಹಿಸಿದರು. ಅತಿಥಿಯಾಗಿ ಡಾ.ಅಂಭಿಕ ಮದುಸೂದನ ನಾಯಕ ಮಾತನಾಡಿ ಸಮಾಜದ ಸಮಗ್ರ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಮಹಿಳೆಯರು ಶಿಕ್ಷಣ ಮತ್ತು ಕೌಶಲಾಭಿವೃದ್ಧಿಯ ಮೂಲಕ ಸಮಾಜದಲ್ಲಿ ಮುನ್ನಡೆಯಬೇಕು ಎಂದು ತಿಳಿಸಿದರು.

ವಿಶೇಷ ಆಮಂತ್ರಿತರಾಗಿ ಆಗಮಿಸಿ ಮಾತನಾಡಿದ ರಾಜ್ಯ ಪ್ರಶಸ್ತಿ ಪುರಸ್ಕತೆ ರತ್ನಮ್ಮ ಮಾತನಾಡಿ ಹೆಣ್ಣು ಸಮಾಜದ ಕಣ್ಣು, ಬದುಕಿನ ಎಲ್ಲಾ ಸವಾಲಗಳನ್ನು ಎದುರಿಸಿ ನಿಲ್ಲುವ ಗಟ್ಟಿಗಿತ್ತಿ,ಎಲ್ಲಾ ಕಷ್ಟದ ದಿನಗಳನ್ನು ಎದುರಿಸಿ ಇಂದು ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಛಾಪು ಮೂಡಿಸಿದ್ದಾಳೆ ಹೆಣ್ಮಕ್ಕಳ ಸಶಸ್ತಿಕರಣ, ಶೋಷಣೆಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಮಹಿಳೆಯರು ಶಿಕ್ಷಿತರಾಗಬೇಕು. ಅಕ್ಷರ ಜ್ಞಾನ ಮಹಿಳೆಗೆ ಸ್ವಾಭಿಮಾನದ ಬದುಕು ನೀಡಲಿದೆ ಎಂದು ಹೇಳಿದರು. ಮಹಿಳೆಯರಿಗೆ ವಿವಿದ ರೀತಿಯ ಸ್ಪರ್ಧೆಗಳು ಏರ್ಪಡಿಸಿದ್ದು ಅದರಲ್ಲಿ ಎಲ್ಲಾ ವಿವಿದ ಇಲಾಖೆಯ ಮಹಿಳೆಯರು ಹುಮ್ಮಸ್ಸಿ ನಿಂದ ಭಾಗವಹಿಸಿ ಸ್ಪರ್ಧೆ ಮಾಡಿದ್ದಾರೆ, ಮತ್ತು ಎಲ್ಲಾ ಇಲಾಖೆಯ ಮಹಿಳೆಯರ ಸಾಧನೆಗಳನ್ನು ಗುರುತಿಸಿ ಸನ್ಮಾನಿಸಲಾಯಿತು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ 36 ಮಹಿಳೆಯರಿಗೆ ಸನ್ಮಾನಿಸಿ ಗೌರವಿಸಿದರು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ನವಲಕಲ್ ಬೃಹನ್ಮಠದ ಅಭಿನವ ಶ್ರೀ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದ್ದರು.

ಈ ಸಂದರ್ಭದಲ್ಲಿ ಮಾಜಿ ಅದ್ಯಕ್ಷ ಅಯ್ಯನಗೌಡ ಐರೆಡ್ಡಿ, ನಾಗಮ್ಮ, ಮಹಿಳಾ ಘಟ ಕದ ಜಿಲ್ಲಾಧ್ಯಕ್ಷೆ ಜಯಶ್ರೀ, ಉಪನ್ಯಾಸಕ ಲಕ್ಷ್ಮಣ ಯಾದವ್, ಪ್ರದೀಪಕುಮಾರ್, ಜಾವೀದ್ ಪಾಷ, ಗೋಪಾಲ, ಸೇರಿದಂತೆ ಎಲ್ಲಾ ಇಲಾಖೆಯ ನೌಕರರು ಇದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಎಸೆಸ್ಸೆಲ್ಸಿ ಮಕ್ಕಳಿಗೆ ಟ್ಯೂಷನ್ ಕ್ಲಾಸ್ ತರಬೇತಿ

ಸಿರವಾರ.ಮಾ23-

ತಾಲೂಕಿನ ಹೀರಾ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಎಸ್ ಎಸ್ ಎಲ್ ಸಿ ಮಕ್ಕಳಿಗೆ ಟ್ಯೂಷನ್ ಕ್ಲಾಸ್ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪ್ರಸ್ತುತ ದಿನದಂದು ಮೂರು ತಿಂಗಳ ಕಾಲ ಯಶಸ್ವಿಯಾಗಿ ಟ್ಯೂಷನ್ ಕ್ಲಾಸ್ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ್ದು ಸಮಾರೋಪ ಕಾರ್ಯಕ್ರಮದಲ್ಲಿ ಯೋಜನಾಧಿಕಾರಿ ಚಂದ್ರಹಾಸನ್ ದೀಪ ಬೆಳಗಿಸುವುದರ ಮೂಲಕ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಹಾಗೂ ಪೂಜ್ಯ ಹೆಗ್ಗಡೆಯವರು ಹಾಗೂ ಮಾತು ಶ್ರೀಮತಿ ಅಮ್ಮನವರ ಮಕ್ಕಳ ಶಿಕ್ಷಣ ಪರ ಕಾಳಜಿಯ ಬಗ್ಗೆ ಮಾಹಿತಿ ನೀಡಿದರು.

ಮುಖ್ಯ ಗುರುಗಳು ಖಾವಂದರ ಸಮಾಜ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಮಕ್ಕಳು ಒಳ್ಳೆಯ ಶಿಕ್ಷಣ ಪಡೆದು ಉನ್ನತ ಸ್ಥಾನದಲ್ಲಿ ಬೆಳೆಯುವ ಬಗ್ಗೆ ಇರುವ ಜನಪರ ಕಾಳಜಿಯನ್ನು ಗೌರವ ವ್ಯಕ್ತಪಡಿಸುತ್ತೇನೆ ಎಂದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ನಮ್ಮ ಶಾಲೆಗೆ ಕೊಟ್ಟಿರುವುದು ನಮಗೆ ತುಂಬಾ ಸಂತಸ ಬಂದಿದೆ ಎಂದರು ತರಬೇತಿ ಟ್ಯೂಷನ್ ತರಬೇತಿ ನಡೆಸಿಕೊಟ್ಟಂತ ವಿಜಯಕುಮಾರ್ ಮಾತನಾಡಿ ಈ ಅವಕಾಶ ನನಗೆ ಸಿಕ್ಕಿದ್ದು ನನ್ನ ಪುಣ್ಯ ಮಕ್ಕಳಿಗೆ ಮೂಲತಃ ಶಿಕ್ಷಣ ಪಡೆಯಲು ಈ ರೀತಿ ಕಾರ್ಯಕ್ರಮಗಳನ್ನು ಪೂಜ್ಯರು ಹಮ್ಮಿಕೊಂಡಿದ್ದು ಪೂಜ್ಯರ ಮಕ್ಕಳ ಕಾಳಜಿಯನ್ನು ನಾನು ತುಂಬಾ ಗೌರಿಸುತ್ತೇನೆ ಎಂದರು ಕಾರ್ಯಕ್ರಮದಲ್ಲಿ ಜ್ಞಾನವಿಕಾಸ ಸಮನ್ವಯ ಅಧಿಕಾರಿ ಯಶೋಧ ವಲಯದ ಮೇಲ್ವಿಚಾರಕರು ಹನುಮಜ್ಜ ಸೇವಾ ಪ್ರತಿನಿಧಿ ವೆಂಕೋಬ ಹಾಗೂ ವಿದ್ಯಾರ್ಥಿಗಳು ಉಪಸಿತರಿದ್ದರು.



ಸಿರುಗುಪ್ಪ : ನೂತನ ರೈಲ್ವೆ ಮಾರ್ಗ ಮತ್ತಿತರ ಬೇಡಿಕೆಗಳ ಈಡೇರಿಕೆಗೆ ಒತ್ತಾಯ ಸಂಸದ್ ತುಕಾರಾಂ ಗೆ ಮನವಿ ಪತ್ರ

ಸಿರುಗುಪ್ಪ,ಮಾ.23-

ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿ ಅಧ್ಯಕ್ಷರ ನೇತೃತ್ವದಲ್ಲಿ ರೈಲ್ವೆ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಳ್ಳಾರಿಯಲ್ಲಿ ಲೋಕಸಭಾ ಸಂಸದ್ ಈ ತುಕಾರಾಂ ಅವರಿಗೆ ಮನವಿ ಪತ್ರ ಸಲ್ಲಿಸಿತು ಬಳ್ಳಾರಿ ಸಿರುಗುಪ್ಪ ಸಿಂಧನೂರು ನೂತನ ರೈಲು ಮಾರ್ಗ ಹಗರಿ ಆದೋನಿ ರೈಲ್ವೆ ಮಾರ್ಗದ ಚಾಲನೆ ಬೇಡಿಕೆ ಈಡೇರಿಕೆಗೆ ಹಾಗೂ ನಿಲುಗಡೆ ಯಾಗಲಿರುವ ಕೊಲ್ಲಾಪುರು ಮುನಗೂರ ರೈಲು ಶಿವಮೊಗ್ಗ ಚೆನ್ನೈ ರೈಲು ಸೇರಿ ಬಳ್ಳಾರಿ ಮಾರ್ಗವಾಗಿ ಒಂದೇ ಭಾರತ್ ಅಥವಾ ಇಂಟರ್ ಸಿಟಿ ಆರಂಭಿಸಬೇಕು ಬಳ್ಳಾರಿಯ ಸ್ಟೇಡಿಯಂ ಪಕ್ಕಾ ಬೈಪಾಸ್ ರೈಲ್ವೆ ನಿಲ್ದಾಣ ಆಗಬೇಕು ಮೈಸೂರು ಅಜ್ಮೀರ್ ರೈಲು ಬಳ್ಳಾರಿ ಹೊಸಪೇಟೆ ಮಾರ್ಗದಲ್ಲಿಯೇ ಸಂಚರಿಸಬೇಕು ಬಳ್ಳಾರಿ ಸಿರುಗುಪ್ಪ ಸಿಂಧನೂರು ನೂತನ ರೈಲು ಮಾರ್ಗ ಆಗಬೇಕು ಹಗರಿ ಅದೋನಿ ರೈಲ್ವೆ ಮಾರ್ಗಕ್ಕೆ ಚಾಲನೆ ನೀಡುವಂತೆ ಕರ್ನಾಟಕ ರಾಜ್ಯ ಕ್ರಿಯಾ ಸಮಿತಿ ಅಧ್ಯಕ್ಷರು ಮಹೇಶ್ವರ ಸ್ವಾಮಿ ಅವರ ನೇತೃತ್ವದಲ್ಲಿ ಕೋರಲಾಯಿತು ವೀರಶೈವ ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್ ಕಾಲೇಜು ಅಧ್ಯಕ್ಷರು ಪಲ್ಲೇದ ಪ್ರಭುಲಿಂಗ ಸಮಿತಿಯ ಪದಾಧಿಕಾರಿಗಳಾದ ಪಿ ಯೋಗಿ ರಾಜ್ ಕುಪಾಗಲ್ ವೀರೇಶ್ ಬಂಡೇ ಗೌಡ ಜನಾಭಿಪ್ರಾಯ ಮುಖಂಡ ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿ ಹೆಚ್ ಕೆ ಗೌರಿಶಂಕರ್ ಕೆ ಎಂ ಉಮಾಪತಿ ಗೌಡ ಬಿ ಎಂ ಎರ್ರಿಸ್ವಾಮಿ ಸಿಂದವಾಳ ಮಹೇಶ ಜಾಲಿಹಾಳ್ ಉಮೇಶ್ ಜಾಲಿಹಾಳ್ ಶ್ರೀಧರ ಮತ್ತಿತರರು ಇದ್ದರು.

15ರವರೆಗೆ ಕಾಲುವೆಗೆ ನೀರು ಹರಿಸುವಂತೆ ಒತ್ತಾಯಿಸಿ ಪ್ರತಿಭಟನೆ



ಜಾಲಹಳ್ಳಿ,ಮಾ.23-

ಡಾ ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಪ್ರತಿಬಟನೆಯನ್ನು ಹಮ್ಮಿಕೊಳ್ಳಲಾಗಿತ್ತು ಈ ಪ್ರತಿಭಟನೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಹಳ್ಳಿಗಳಿಂದ ರೈತರು ಭಾಗವಹಿಸಿದ್ದರು ಏಪ್ರಿಲ್ 15ರವರೆಗೆ ನೀರು ಬಿಡದೆ ಹೋದರೆ ರೈತರು ಸಂಕಷ್ಟದಲ್ಲಿ ಸಿಲಿಕಬೇಕಾಗುತ್ತದೆ ಈಗಾಗಲೇ ರೈತರು ಫಸಲು ಕೈಗೆ ಬರುವ ಹಂತದಲ್ಲಿ ರುವುದರಿಂದ ನೀರು ಬಿಡದೆ ಹೋದರೆ ರೈತರು ಕಂಗಾಲಾಗಬೇಕಾಗುತ್ತದೆ ಕೈಗೆ ಬಂದ ತುತ್ತು ಬಾಯಿಗೆ ಬರೆದೆ ಹೊಗುತ್ತದೆ ಎಂದು ರಂಗಣ್ಣ ಕೋಲ್ಕಾರ್ ಮಾತನಾಡಿದರು.

ರೈತರ ಬೆಳೆಗಳಾದಂತಹ ಶೇಂಗಾ ಸಜ್ಜೆ ಮೆಣಸಿನಕಾಯಿ.ಭತ್ತ ಇನ್ನಿತರ ಬೆಳೆಗಳು ಕಟಾವಿಗೆ ಬರಲು ಏಪ್ರಿಲ್ 15ರವರೆಗೆ ನೀರಿನ ಅವಶ್ಯಕತೆ ತುಂಬಾ ಇರುತ್ತದೆ ಇದನ್ನು ಅರಿತು ಸಂಬಂಧಪಟ್ಟ ಅಧಿಕಾರಿಗಳು ರೈತರ ಹಿತ ದೃಷ್ಟಿಯಿಂದ ಸರಕಾರಕ್ಕೆ ಒತ್ತಡ ತಂದು ರೈತರಿಗೆ ಅನುಕೂಲ ಮಾಡಿಕೊಡಬೇಕು. ದರಣಿಯಲ್ಲಿ ಅಧಿಕಾರಿಗಳಿಗೆ ಒತ್ತಾಯ ಮಾಡಿದರು.


ಧರಣಿ ಸ್ಥಳಕ್ಕೆ ಸೂಪಡೆಂಟ್ ಇಂಜಿನಿಯರ್ ರಮೇಶ ರಾಥೋಡ್. ಇಇ.ಸುರೇಂದ್ರರೆಡ್ಡಿ. ಎಇಇ. ಭಜಂತ್ರಿ ಜೆಇ ಶ್ರೀದರ್ ಬಲ್ಲಿದವ್. ಆಗಮಿಸಿದ್ದರು.

ಈ ಪ್ರತಿಭಟನೆಯಲ್ಲಿ ಪ್ರಾಂತ್ಯ ಸಂಘಟನೆ ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ. ತಾಲೂಕ ಅಧ್ಯಕ್ಷ ಹನುಮಂತ ಗುರಿಕಾರ. ಕಾರ್ಯದರ್ಶಿ ಮೌನೇಶ ಜಾಲಹಳ್ಳಿ

ನೀರು ಬಳಕೆದರ ಸಂಘಟನೆ ಅಧ್ಯಕ್ಷ ಶಿವರಾಜ ಯರಕಮಟ್ಟಿ. ಕಾರ್ಯದರ್ಶಿ ಭೀಮಣ್ಣ ಡೆಂಗಿ. ಲಕ್ಕಪ್ಪ ಗೌಡ ಚಿಂಚೊಡಿ. ಸಿದ್ದಪ್ಪ ಗುಮೆದಾರ. ಭೂತಪ್ಪ ದೇವರಮನಿ. ಹನುಮಂತ ಮಡಿವಾಳ. ಸಾಬಣ್ಣ ಕವಮ್ಮಲದಿನ್ನಿ. ಮುಕ್ತಮ ಭಾಷ. ದುರ್ಗಪ್ಪ ಹೊರಟ್ಟಿ. ಮಹಾಲಿಂಗ ದೊಡ್ಡಮನಿ. ಶ್ರೀನಿವಾಸ ತಿಮ್ಮಪೂರ.

ಯಂಕಪ್ಪ ಲಿಂಗದಹಳ್ಳಿ. ಟಿ ಆದಿನಾರಾಯಣ. ರಾಜ ರೆಡ್ಡಿ ಹನುಮಂತ ಮುಂಡಲಗುಡ್ಡ. ಹನುಮಂತ ಗಾಜಲ್ದಿನ್ನಿ. ಅಂಜು ರಾಮಪ್ಪಳ್ಳಿ.ರಮೇಶ ಗಾಂಜಿ. ರವಿ ಚಿಂಚಿರಕಿ. ಈನ್ನು ಮುಂತಾದವರು ರೈತರು ಭಾಗವಹಿಸಿದ್ದರು

ಶಾಸಕಿ ಕರೆಮ್ಮ ಜಿ ನಾಯಕರಿಂದ ಸುರಕ್ಷಿತ ಟೋಲ್ ಕಿಟ್ ವಿತರಣೆ ಹಾಗೂ ಆರೋಗ್ಯ ಸಂಚಾರಿ ವಾಹನಕ್ಕೆ ಚಾಲನೆ



ದೇವದುರ್ಗ ದಿ.22/03/2025 ರಂದು ಪ್ರವಾಸಿ ಮಂದಿರದ ಶಾಸಕರ ಕಾರ್ಯಾಲಯದಲ್ಲಿ, ಮಾನ್ಯ ಶಾಸಕರಾದ ಕರೆಮ್ಮ ಜಿ ನಾಯಕ ರವರು, ಕಾರ್ಮಿಕ ಇಲಾಖೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಸಂಚಾರಿ ಆರೋಗ್ಯ ಘಟಕ ಉದ್ಘಾಟನೆ ಹಾಗೂ ಸುರಕ್ಷಿತ ಟೂಲ್ ವಿತರಣೆ ಮಾಡಿ ತಾಲೂಕಿನ ಕಾರ್ಮಿಕರಿಗೆ ಎಲ್ಲಾ ಸೌಲಭ್ಯಗಳು ದೊರಕುವಂತಾಗ ಬೇಕು ಎಂದರು. ದೇವರಾಜ ಅರಸು ಹೊಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ) ವತಿಯಿಂದ, ಬಡ ಹಿಂದುಳಿದ ಬಡ ಮಹಿಳೆಯರು ಸಾವಲಂಬಿಯಾಗಿ ಸ್ವಯಂ ಉದ್ಯೋಗ ಆರಂಭಿಸಲು ಹೊಲಿಗೆ ಯಂತ್ರಗಳನ್ನು ವಿತರಿಸಿ ಕಾರ್ಮಿಕರು ಇಲಾಖೆಯಿಂದ ಸಿಗುವ ಸೌಲಭ್ಯಗಳನ್ನು ತಿಳಿದುಕೊಂಡು ಸದುಪಯೊಗ ಪಡಿಸಿಕೊಳ್ಳಬೇಕು ಹಾಗೂ ಸಂಚಾರಿ ಆರೋಗ್ಯ ವಾಹನ ನೀವು ಕೆಲಸ ಮಾಡುವ ಸ್ಥಳದಲ್ಲಿ ಅವಘಡಗಳು ಸಂಭವಿಸಿದರೆ ತತಕ್ಷಣ ಸಹಾಯವಾಣಿಗೆ ಕರೆ ಮಾಡಿದರೆ ಕೆಲಸದ ಸ್ಥಳಕ್ಕೆ ಬಂದು ಪ್ರಥಮ ಚಿಕಿತ್ಸೆ ನೀಡಿ ಮುಂದಿನ ಚಿಕಿತ್ಸೆ ಗೆ ಆಸ್ಪತ್ರೆಗೆ ಸೇರಿಸಿ ಕಾರಮಿಕರಿಗೆ ಅನುಕೂಲಮಾಡಿಕೊಡುತ್ತದೆ ಎಂದರು. ಮುಂದಿನ ದಿನಮಾನಗಳಲ್ಲಿ ಕುಮಾರಸ್ವಾಮಿಯವರಿಗೆ ಮನವಿ ಮಾಡಿ ಕಾರ್ಮಿಕ ಇಲಾಖೆಗೆ ಒಂದು ಸ್ವಂತ ಕಟ್ಟಡ, ಕಾರ್ಮಿಕ ಭವನ ಹಾಗೂ ಕಾರ್ಮಿಕ ಮಕ್ಕಳಿಗೆ ಪ್ರತ್ಯೇಕ ಶಾಲೆ ಮಾಡಿಕೊಡುವಂತೆ ಕೇಳುವದಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿ ಮಲ್ಲಪ್ಪ, ಶ್ರೀಧರ,ಬಸನಗೌಡ ದೇಸಾಯಿ, ಶರಣಗೌಡ ಸುಂಕೇಶ್ವರಹಾಳ, ಮುಂಡರಗಿ ಸಿದ್ದಣ್ಣ ತಾತ, ಶರಣಪ್ಪ ಬಳೆ, ರೇಣುಕಾ ಸ್ವಾಮಿ, ಶಾಲಂ ಉದ್ದಾರ ಗುರುರಾಜ ಪತ್ತಾರ ರಮೇಶ್ ರಾಮನಾಳ,ಗೊವಿಂದ ರಾಜ್ ನಾಯಕ, ಹಾಗೂ ಜೆಡಿಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಉಪಸ್ಥಿತರಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR